ಕರ್ನಾಟಕ ವಿಧಾನಸಭೆ

ಬುಧವಾರ 27ನೇ ಸೆಪ್ಟೆಂಬರ್ 2006 ರಂದು
ಸದನವು ಬೆಳಗಾವಿಯ ಜವಾಹರಲಾಲ್ ನೆಹರು ವೈದ್ಯಕೀಯ ವಿದ್ಯಾಲಯದ
ಆವರಣದಲ್ಲಿರುವ ಡಾ: ಬಿ.ಎಸ್. ಜೀರಗೆ ಸಂಭಾಗಣದಲ್ಲಿ
ಬೆಳಿಗ್ಗೆ: 11–00 ಗಂಟೆಗೆ ಸಮಾವೇಶಗೊಂಡಿತು.

ಅಧ್ಯಕ್ಷರು (ಶ್ರೀ ಕೃಷ್ಣರವರು)
ಅಧ್ಯಕ್ಷ ಪೀಠವನ್ನು ಅಲಂಕರಿಸಿದರು

11.00 ಎ.ಎಂ.

ಶ್ರೀ ವಾಟಾಳ್ ನಾಗರಾಜ್: ಮಾನ್ಯ ಅಧ್ಯಕ್ಷರೇ ಗಡಿನಾಡಿನಲ್ಲಿ ಸಭೆ ಮಾಡುತ್ತಿದ್ದೇವೆ. ಗಡಿನಾಡಿನ ಆಶ್ವಾಸನೆಗಳ ಬಗ್ಗೆ ಕೂಡ ಚಿಂತನೆ ಮಾಡತಕ್ಕದ್ದು ನಮ್ಮಗಳ ಕರ್ತವ್ಯ.

1. ಅಧ್ಯಕ್ಷರ ಅಪ್ಪಣೆ ಮೇರೆಗೆ
ವಿಷಯ : ವಿಧಾನಪರಿಷತ್ತಿನ ವಿರೋಧ ಪಕ್ಷದ ನಾಯಕರು ರಾಜ್ಯಪಾಲರಿಗೆ ಬರೆದಿರುವ ಪತ್ರಕ್ಕೆ ಪ್ರತಿಕ್ರಿಯೆ ನೀಡಿರುವ ವಿಷಯದ ಬಗ್ಗೆ ಚರ್ಚೆಗೆ ಅವಕಾಶ ನೀಡುವ ಬಗ್ಗೆ.

ಶ್ರೀ ಎಸ್. ಧರ್ಮಸಿಂಗ್ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೆ, ನಿನ್ನೆ ಹೆಚ್,ಕೆ. ಪಾಟೀಲರು, ವಿಧಾನ ಪರಿಷತ್ತಿನ ವಿರೋಧ ಪಕ್ಷದ ನಾಯಕರಾಗಿದ್ದಾರೆ, ಅವರು ರಾಜ್ಯಪಾಲರಿಗೆ ಒಂದು ಪತ್ರವನ್ನು ಬರೆದಿದ್ದಾರೆ. ರಾಜ್ಯಪಾಲರೂ ಕೂಡ ಅವರು ಯಾವ್ಯಾವ ವಿಷಯಗಳ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ ಅದಕ್ಕೆ ಉತ್ತರವನ್ನು ಕೂಡ ಕೊಟ್ಟಿದ್ದಾರೆ. ಎರಡೂ ಕೂಡ ಪತ್ರಿಕೆಯಲ್ಲಿ ಬಂದಿದೆ. ನಾಳೆ ರಾಜ್ಯಪಾಲರು ಬಂದು ಎರಡೂ ಸದನದ ಸದಸ್ಯರುಗಳನ್ನು ಉದ್ದೇಶಿಸಿ ಮಾತನಾಡುವವರಿದ್ದಾರೆ. ನೀವು ಅವರನ್ನು ಕರೆಸಿದ್ದೀರಿ. ಅವರು ನಾಳೆ ಬರುತ್ತಿದ್ದಾರೆ. ಅದಕ್ಕೆ ನಮ್ಮ ಅಭ್ಯಂತರವೇನಿಲ್ಲ. ಆದರೆ ನಾನು ನಿನ್ನೆ ಪ್ರಸ್ತಾಪ ಮಾಡಿದಾಗ, ತಾವು ಹೇಳಿದಿರಿ ಯಾವ ಪತ್ರಗಳನ್ನು ಹೆಚ್.ಕೆ. ಪಾಟೀಲರು ಬರೆದಿದ್ದಾರೆ, ಅದಕ್ಕೆ ಉತ್ತರವಾಗಿ ರಾಜ್ಯಪಾಲರು ಬರೆದಿದ್ದಾರೆ. ಒಂದು ನೋಟೀಸ್ ಕೊಡಬೇಕೆಂದು ಹೇಳಿದ್ದೀರಿ. ಆ ನೋಟೀಸನ್ನು ನಾನು ಕೊಟ್ಟಿದ್ದೇನೆ. ಬಹಳ ಪ್ರಮುಖವಾದ ಈ ವಿಚಾರ ಪತ್ರಿಕೆಗಳಲ್ಲಿ ಬರುತ್ತಿದೆ, ಕರ್ನಾಟಕದ ರಾಜಕಾರಣದಲ್ಲಿ ಯಾವ ರೀತಿಯಾಗಿ ಈ ಸಮ್ಮಿಶ್ರ ಸರ್ಕಾರ ಮಾಡತಕ್ಕ ಕಾರ್ಯವೈಖರಿ, ಈವತ್ತು ಲಾ ಅಂಡ್ ಆರ್ಡರ್ ಬಗ್ಗೆ, ಗಡಿ ಹಗರಣದ ಬಗ್ಗೆ ಹಾಗೂ ಈವತ್ತು ಮತ್ತೊಂದು ಪ್ರಕರಣ ಪತ್ರಿಕೆಯಲ್ಲಿ ಬಂದಿದೆ. ನೇರವಾಗಿ ಟ್ರಾನ್ಸ್‌ಪೋರ್ಟ್ ಕಮಿಷನರ್ ನಾರಾಯಣಗೌಡರು ಸಂಭಾಷಣೆ ಮಾಡತಕ್ಕ ರೀತಿಯಲ್ಲಿ ಈವತ್ತು ಮುಖ್ಯಮಂತ್ರಿಗಳ

ಮೇಲೆ ಆಪಾದನೆ ಕೂಡ ಇದೆ. ಸರ್ಕಾರದ ಮೇಲೆ ಅಪಾದನೆ ಕೂಡ ಇದೆ. ಇವೆಲ್ಲವನ್ನೂ ತೆಗೆದುಕೊಂಡು ರಾಜ್ಯಪಾಲರು ಗಂಭೀರವಾದಂಥ ಪತ್ರ ಬರೆದಿದ್ದಾರೆ. ಎಂದೂ ಕೂಡ ರಾಜ್ಯಪಾಲರು ಆ ರೀತಿಯಾಗಿ ಪತ್ರವನ್ನು ಬರೆಯುವುದಿಲ್ಲ. ರಾಜ್ಯಪಾಲರು ಒತ್ತಡದ ಮೇಲೆ it has forced is excellence the therefore governor and he has written letter to Sri H.K. Patil. ನಿನ್ನೆ ಹೇಳಿದ್ದೇನೆ. ಪ್ರಪ್ರಥಮವಾಗಿ ಆ ಒಂದು ಪತ್ರದ ಬಗ್ಗೆ ಈವತ್ತು ನಾವು ಚರ್ಚೆ ಮಾಡುವವರಿದ್ದೇವೆ. ಚರ್ಚೆ ಮಾಡುವುದಕ್ಕೆ ಅವಕಾಶ ಕೊಡಬೇಕು. ಅದರಲ್ಲಿ ಎಲ್ಲಾ ವಿಷಯ ಬರುತ್ತದೆ. ಎಲ್ಲಾ ವಿಷಯಗಳನ್ನು ಪ್ರಸ್ತಾಪ ಮಾಡುತ್ತಿದ್ದಾರೆ.

ಅಧ್ಯಕ್ಷರು : ಅದರ ಬಗ್ಗೆ ನೋಟಿಸ್ ಕೊಡಿ ಎಂದು ನಾನು ಹೇಳಿದೆ. ತಾವು ಯಾವ ನಿಯಮದ ಅಡಿಯಲ್ಲಿ ಅದನ್ನು ಕೊಟ್ಟಿದ್ದೀರಿ? ತಾವು ಪತ್ರವನ್ನೇನೋ ಕೊಟ್ಟಿದ್ದೀರಿ. ಆದರೆ ನಿಯಮಾವಳಿಯ ಮೇಲೆ ಕೊಟ್ಟಿಲ್ಲ.

ಶ್ರೀ ಎನ್. ಧರ್ಮ್‌ಸಿಂಗ್ : ಯಾವ ನಿಯಮದ ಮೇಲೆ ಈ ಸದನವನ್ನು ಕರೆದಿದ್ದೀರಿ? ನಿಯಮ ಬಾಹಿರವಾದಂಥ.....

ಅಧ್ಯಕ್ಷರು : ನಿಯಮ ಬಾಹಿರವಾಗಿಲ್ಲ.

ಶ್ರೀ ಎನ್. ಧರ್ಮ್‌ಸಿಂಗ್ : ನಿಯಮ ಬಾಹಿರವಾಗಿದೆ. ಬಿಸಿನೆಸ್ ಅಡ್ವೈಸರಿ ಕಮಿಟಿಯಲ್ಲಿ ಚರ್ಚೆಯಾಗಿದೆ. ಅಲ್ಲಿ ಚರ್ಚೆಯಾಗಿ, ಆ ಪ್ರಕಾರ ಯಾವುದೂ ಕೂಡ ಚರ್ಚೆ ಮಾಡಿಲ್ಲ.

ಅಧ್ಯಕ್ಷರು : ಯಾವ ನಿಯಮದ ಅಡಿಯಲ್ಲಿ ಚರ್ಚೆ ಮಾಡಬೇಕೆಂದು ನೀವು ಕೊಟ್ಟಿಲ್ಲ.

ಶ್ರೀ ಎನ್. ಧರ್ಮ್‌ಸಿಂಗ್ : ಈವತ್ತು ಯಾವ ವಿಷಯವನ್ನು ಚರ್ಚೆ ಮಾಡಬೇಕೆಂದು ಕೂಡ ಪ್ರಸ್ತಾಪ ಮಾಡಿಲ್ಲ. ಅದಕ್ಕೆ ನಾವು ಮಹಾಜನ್ ವರದಿಯ ಬಗ್ಗೆ ಪ್ರಸ್ತಾಪಕ್ಕೆ ತಂದಿದ್ದೆವು. ಅದೊಂದೇ ನಿಮಗೆ ಘನತೆ ಗೌರವ ಕೊಡತಕ್ಕದ್ದು. ಈವತ್ತು ಈ ಬೆಳಗಾಂನಲ್ಲಿ, ಗಡಿ ಭಾಗದಲ್ಲಿ ನಡೆಯತಕ್ಕ ಅಧಿವೇಶನದಲ್ಲಿ 4ನೇ ಸಲ ಮಹಾಜನ ವರದಿಯೇ ಅಂತಿಮ ಎನ್ನತಕ್ಕ ತೀರ್ಮಾನ that historic decision we have taken. ಅದನ್ನೂ ನಾವು ಮಾಡಿದ್ದು, ಈವತ್ತು ನಾವೇನು ಕೇಳುತ್ತಿದ್ದೇವೆಂದರೆ, ನೀವು ಘನತೆವೆತ್ತ ರಾಜ್ಯಪಾಲರಿಗೆ ಕರೆಸುತ್ತಿದ್ದೀರಿ. ಅವರನ್ನು ಕರೆಸಿದರೆ ಮೆರಗು ಬರುತ್ತದೆಂದು ತಾವು ಹೇಳಿದ್ದೀರಿ. ಯಾವ ನಿಯಮದ ಮೇಲೆ ಬರಬೇಕು ಎಂಬ ಬಗ್ಗೆ ವಾದವಿವಾದವಾಯಿತು. ಕೊನೆಯದಾಗಿ ರಾಜ್ಯಪಾಲರು ಒಪ್ಪಿದ್ದಾರೆ, ನಾಳೆ ಅವರು ಬರತಕ್ಕ ಕಾರ್ಯಕ್ರಮವಿದೆ. ಅದರ ಮಧ್ಯದಲ್ಲಿ ರಾಜ್ಯಪಾಲರು ಈ ಸರ್ಕಾರದ ಬಗ್ಗೆ ಅನಿಸಿಕೆಯೇನಿದೆ, ಕನಸರ್ನ್ ಏನಿದೆ ಅದೆಲ್ಲವನ್ನೂ ಕೂಡ ಅವರ ಪತ್ರದಲ್ಲಿ ಬಹಿರಂಗ ಮಾಡಿದ್ದಾರೆ.

ಅಧ್ಯಕ್ಷರು : ತಾವು ಯಾವ ನಿಯಮಾವಳಿಯಲ್ಲಿ ತೆಗೆದುಕೊಳ್ಳಬೇಕೆಂದು

ಹೇಳಿಲ್ಲ. ಯಾವ ನಿಯಮಾವಳಿಯ ಮೇಲೆ ಎಂದು ಕೊಟ್ಟಿಲ್ಲ. ನಿನ್ನೆ ಪ್ರಸ್ತಾಪವನ್ನು ಮಾಡಿದಾಗ ಸುಮ್ಮನೆ ಪತ್ರವನ್ನು ಕೊಟ್ಟಿದ್ದೀರಿ.

ಶ್ರೀ ಡಿ.ಕೆ. ಶಿವಕುಮಾರ್ : ಈ ವಿಧಾನ ಸಭೆಯನ್ನು ಯಾವ ನಿಯಮಾವಳಿಯ ಮೇಲೆ ಕರೆದಿದ್ದೀರಿ?

ಅಧ್ಯಕ್ಷರು : ಇಲ್ಲಿ ಎಲ್ಲರೂ ನಿಂತುಕೊಂಡು ಮಾತನಾಡಿದರೆ ದಭಾವಣೆ ಸೆಕ್ಷನ್ ಆಗುತ್ತದೆ. ಆ ರೀತಿಯಾಗುವುದಿಲ್ಲ. ಯಾವ ನಿಯಮಾವಳಿಯ ಕೆಳಗಡೆ ಕೊಟ್ಟಿದ್ದೀರಿ ಎಂದು ನಾನು ಕೇಳುತ್ತಿದ್ದೇನೆ. ನಿನ್ನೆ ನೀವು ಇದರ ಬಗ್ಗೆ ಪ್ರಸ್ತಾಪ ಮಾಡಿದಾಗ ಕೂಡ ಅದನ್ನು ಕಳುಹಿಸಿಕೊಡಿ ಎಂದು ನಆನು ಹೇಳಿದೆ. ಆದರೆ ಅವರು ಪತ್ರವನ್ನು ಮಾತ್ರ ಕಳುಹಿಸಿದ್ದಾರೆ.

ಶ್ರೀ ಎನ್. ಧರ್ಮ್‌ಸಿಂಗ್ : ನನಗೆ ರೂಲ್ಸ್ ಅಂಡ್ ಪ್ರೊಸೀಜರ್ ಬಗ್ಗೆ ಗೊತ್ತಿದೆ. ಕಾನೂನು ಬಗ್ಗೆ ಕೂಡ ಗೊತ್ತಿದೆ. ತಾವು ಅಧ್ಯಕ್ಷರಾಗಿದ್ದೀರಿ. ನಾವು ಸದನದಲ್ಲಿ ವಿರೋಧ ಪಕ್ಷದಲ್ಲಿ ಕುಳಿತು ಕೆಲಸ ಮಾಡುತ್ತಿದ್ದೇವೆ. ಈವತ್ತು ರಾಜ್ಯಪಾಲರು ಬರೆದಂಥ ಪತ್ರವೇನು ಪತ್ರಿಕೆಗಳಲ್ಲಿ ಬಂದಿದೆ. ಅದಕ್ಕೆ ಯಾವ ನಿಯಮ ಈವತ್ತು ರಾಜ್ಯದ ಏನೇನು ವಿಷಯಗಳಿವೆ ಅದೆಲ್ಲದರ ಬಗ್ಗೆ ಚರ್ಚೆಯಾಗಬೆಕು. ಚರ್ಚೆಗೆ ಅವಕಾಶ ಕೊಡದಿದ್ದರೆ.....

ಅಧ್ಯಕ್ಷರು : ಚರ್ಚೆಗೆ ಅವಕಾಶ ಕೊಡದಿರುವ ಪ್ರಶ್ನೆಯಲ್ಲ. ಯಾವ ನಿಯಮದ ಅಡಿಯಲ್ಲಿ ಎಂದು ನೋಟೀಸ್ ಕಳುಹಿಸಿಲ್ಲ. ಅದನ್ನು ಕಳುಹಿಸಿಕೊಡಿ ಎಂದು ಹೇಳುತ್ತಿದ್ದೇನೆ.

ಶ್ರೀ ಎನ್. ಧರ್ಮಸಿಂಗ್ : ಇಲ್ಲ ಅದನ್ನು ಕಳುಹಿಸಿಕೊಟ್ಟಿದ್ದೇನೆ.

ಅಧ್ಯಕ್ಷರು : ಕಳುಹಿಸಿಲ್ಲ. ನೀವು ಬರೀ ಪತ್ರವನ್ನು ಕಳುಹಿಸಿದ್ದೀರಿ.

ಶ್ರೀ ಎನ್. ಧರ್ಮಸಿಂಗ್ : ಇಲ್ಲ, ಕಚೇರಿಗೆ ಕೊಟ್ಟು ಸಹಿಯನ್ನೂ ಸಹ ತೆಗೆದುಕೊಂಡಿದ್ದೇವೆ.

ಅಧ್ಯಕ್ಷರು : ಕೇವಲ ಪತ್ರವನ್ನು ಕೊಟ್ಟಿದ್ದೀರಿ. ಅದರಲ್ಲಿ ಯಾವ ನಿಯಮದ ಅಡಿ ಎಂದು ಹೇಳಲಿಲ್ಲ. ಅದನ್ನು ಕಳುಹಿಸಿಕೊಡಿ.

ಶ್ರೀ ಆರ್.ವಿ. ದೇಶ್‌ಪಾಂಡೆ : ಮಾನ್ಯ ಅಧ್ಯಕ್ಷರೆ, ನಿನ್ನೆ ವಿರೋಧ ಪಕ್ಷದ ನಾಯಕರು ಈ ವಿಚಾರವನ್ನು ಪ್ರಸ್ತಾಪ ಮಾಡಿದಾಗ, ತಾವು ಅದಕ್ಕೆ ಪತ್ರವನ್ನು ಕಳುಹಿಸಿ ಎಂದು ಹೇಳಿದಿರಿ.

Mr. Speaker : No. ಆ ರೀತಿ ನಾನು ಹೇಳಲಿಲ್ಲ. ನಿಯಮಾವಳಿ ಅಡಿಯಲ್ಲಿ ಪತ್ರವನ್ನು ಕಳುಹಿಸಿ ಎಂದು ಹೇಳಿದೆ. ಆ ಪತ್ರವನ್ನು ಕಳುಹಿಸಿ ಎಂದು ಹೇಳಲಿಲ್ಲ.

ಶ್ರೀ ಆರ್.ವಿ. ದೇಶ್‌ಪಾಂಡೆ : ನಿನ್ನೆ ವಿರೋಧ ಪಕ್ಷದ ನಾಯಕರು ಇದರ ಬಗ್ಗೆ ಪ್ರಸ್ತಾಪ ಮಾಡಿದಾಗ ನೀವು ಆಯಿತು. ಆ ಪತ್ರವನ್ನು ಕಳುಹಿಸಿ ಎಂದು

ಹೇಳಿದಿರಿ. ಆ ಪ್ರಕಾರ ಅವರು ಅದನ್ನು ತಮಗೆ ಕಳುಹಿಸಿದ್ದಾರೆ. ಆದರೆ ತಾವು ಈಗ ಅದು ನಿಯಮಾವಳಿಯ ಅಡಿಯಲಿ ಇಲ್ಲವೆಂದು ಹೇಳಿ ಚರ್ಚೆಗೆ ಅವಕಾಶ ಮಾಡಿಕೊಡದಿದ್ದರೆ ತಪ್ಪಾಗುತ್ತದೆ. ಈವತ್ತಿನ ಅಜೆಂಡಾವನ್ನು ನೋಡಿ.

ಅಧ್ಯಕ್ಷರು : ಮಾನ್ಯ ದೇಶಪಾಂಡೆಯವರೇ, ತಾವು ಹಿರಿಯ ಸದಸ್ಯರು, ಯಾವುದಾದರೂ ವಿಷಯವನ್ನು ಪ್ರಸ್ತಾಪ ಮಾಡಿದಾಗ, ಅದು ಯಾವ ನಿಯಮಾವಳಿಯ ಅಡಿಯಲ್ಲಿ ಇದೆ ಎಂಬ ಬಗ್ಗೆ ಕಳುಹಿಸಿ ಎಂದು ಹೇಳಿದರೆ, ಯಾವುದಾದರೂ ಒಂದು ನೋಟೀಸ್ ಇದ್ದರೆ ಇಂಥ ನಿಯಮಾವಳಿಯ ಅಡಿಯಲ್ಲಿ ಎಂದು ಕಳುಹಿಸಿಕೊಟ್ಟರೆ ಅದನ್ನು ಕನ್‌ಸಿಡರ್ ಮಾಡಿ ಅದಕ್ಕೆ ಅವಕಾಶ ಕೊಡುತ್ತೇನೆ. ಆ ರೀತಿ ಕಳುಹಿಸಿಕೊಡಿ ಎಂದು ನಾನು ಹೇಳಿದೆ. ಅದನ್ನು ನಾನು ರಿಜೆಕ್ಟ್ ಮಾಡಿಲ್ಲ.

ಶ್ರೀ ಎನ್. ಧರ್ಮಸಿಂಗ್ : ರಾಜ್ಯಪಾಲರು ಬರೆದಂಥ ಪತ್ರದ ಬಗ್ಗೆ ಚರ್ಚೆ ಮಾಡತಕ್ಕದ್ದಲ್ಲವೆಂದೂ ನೀವು ಕೊಟ್ಟಂಥ ನೋಟೀಸನ್ನು ನಾವು ತಿರಸ್ಕಾರ ಮಾಡುತ್ತೇವೆಂದು ತಾವು ಹೇಳಿ.

ಅಧ್ಯಕ್ಷರು : ನೀವು ನೋಟೀಸನ್ನೇ ಕೊಟ್ಟಿಲ್ಲವಲ್ಲಾ?

ಶ್ರೀ ಎನ್. ಧರ್ಮಸಿಂಗ್ : ನೋಟೀಸನ್ನು ಕೊಟ್ಟಿದ್ದೇವೆ.

ಶ್ರೀ ಎನ್. ಧರ್ಮಸಿಂಗ್ : XX

(ಅಡಚಣೆ)

ಅಧ್ಯಕ್ಷರು : ತಾವು ಕೇವಲ ಪತ್ರವನ್ನು ಕಳುಹಿಸಿದ್ದೀರಿ.

(ಅಡಚಣೆ)

ಶ್ರೀ ಹೆಚ್.ಸಿ. ಬಾಲಕೃಷ್ಣ : XX

(ಅಡಚಣೆ)

ಶ್ರೀ ಎನ್. ಧರ್ಮಸಿಂಗ್ : ನಿನ್ನೆ ನಾನು ಪ್ರಸ್ತಾಪ ಮಾಡಿದೆ. ಪ್ರಸ್ತಾಪ ಮಾಡಿದಮೇಲೆ ತಾವು ನೋಟೀಸ್ ಕೊಡಿ ಎಂದು ಹೇಳಿದಿರಿ. ಆಗಲೇ ಪತ್ರವನ್ನು ಬರೆದು ಹೆಚ್.ಕೆ. ಪಾಟೀಲರ ಪತ್ರ ಮತ್ತು ರಾಜ್ಯಪಾಲರ ಪತ್ರವನ್ನು ಲಗತ್ತಿಸಿ ನಾವು ಕೊಟ್ಟಿದ್ದೇವೆ. ಇಲ್ಲೇ ಕೊಟ್ಟು ಸಹಿ ಸಹ ತೆಗೆದುಕೊಂಡಿದ್ದೇವೆ.

ಅಧ್ಯಕ್ಷರು : ಕೇವಲ ಪತ್ರವನ್ನು ಕೊಟ್ಟಿದ್ದೀರಿ.

ಶ್ರೀ ಎನ್. ಧರ್ಮಸಿಂಗ್ : ಪತ್ರವನ್ನು ಕೊಡದೆಯೇ ಇನ್ನೇನನ್ನು ಕೊಡಬೇಕಾಗಿತ್ತು? ಈಗ ಪತ್ರವನ್ನು ಕೊಟ್ಟಿದ್ದೇವೆ, ಅವಕಾಶ ಕೊಡಿ.

ಅಧ್ಯಕ್ಷರು : ಯಾವ ನಿಯಮದ ಅಡಿಯಲ್ಲಿ ಎಂದು ನೋಟೀಸನ್ನು ಕೊಡಬೇಕಲ್ಲಾ?

XX ಈ ಪದಗಳನ್ನು ಮಾನ್ಯ ಸಭಾಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದುಹಾಕಲಾಗಿದೆ.

ಶ್ರೀ ಎನ್. ಧರ್ಮಸಿಂಗ್ : ಮಾನ್ಯ ಅಧ್ಯಕ್ಷರೆ, ತಾವು ವಿದೇಶ ಪ್ರವಾಸಕ್ಕೆ ಹೋಗಿ ಬಂದಕಡಲೇ ಸದನವನ್ನು ಕರೆದಿದ್ದೀರಿ. ಈ ಗಡಿ ಭಾಗದಲ್ಲಿ ನಡೆಯತಕ್ಕ ಸದನಕ್ಕೆ ನಾವು ಸಹಕಾರವನ್ನು ಕೊಟ್ಟಿದ್ದೇವೆ. ನೀವು ಯಾವಾಗ ನೋಟೀಸನ್ನು ಕಳುಹಿಸಬೇಕೆಂದು ಹೇಳಿದಿರೊ ಆಗಲೇ ನೊಟೀಸ್, ಪಾಟೀಲರ ಪತ್ರ ರಾಜ್ಯಪಾಲರ ಪತ್ರ ಎರಡೂ ಕೂಡಿಯೇ ಕಳುಹಿಸಿದ್ದೇವೆ.

ಅಧ್ಯಕ್ಷರು : ನೀವು ನೋಟೀಸ್‌ನ್ನು ಕಳುಹಿಸಿಲ್ಲ. ನೀವು ಪತ್ರವನ್ನು ಮಾತ್ರ ಕಳುಹಿಸಿದ್ದೀರಿ.

ಶ್ರೀ ಎನ್. ಧರ್ಮಸಿಂಗ್ : ಅನುಮತಿ ಕೊಡಬೇಕೆಂದು ಕೇಳಿದ್ದೇವೆ.

ಶ್ರೀ ಎನ್. ಧರ್ಮಸಿಂಗ್ : ನಾವು ನಿಮ್ಮ ಆದೇಶವನ್ನು ಪಾಲನೆ ಮಾಡಿದ್ದೇವೆ, ನಾನು ಎತ್ತಿದಂಥ ವಿಷಯದ ಬಗ್ಗೆ ತಾವು ಒಂದು ಪತ್ರವನ್ನು ಕಳುಹಿಸಿ ಎಂದು ಹೇಳಿದ ಮೇಲೆ ಅದನ್ನು ಕಳುಹಿಸಿಕೊಟ್ಟಿದ್ದೇವೆ. ಈವತ್ತು ಅವಕಾಶ ಕಲ್ಪಿಸಿಕೊಡಿ. ನಾವು ಉಲ್ಲೇಖ ಮಾಡುತ್ತೇವೆ.

ಶ್ರೀ ಎಂ.ಪಿ. ಪ್ರಕಾಶ್ (ಗೃಹ ಮತ್ತು ಕಾನೂನು ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಅಧ್ಯಕ್ಷರೆ, ಮಾನ್ಯ ವಿರೋಧ ಪಕ್ಷದ ನಾಯಕರು ದಿನಾಂಕ 26.9.2006ಕ್ಕೆ 22.9.2006ರಂದು ವಿಧಾನ ಪರಿಷತ್ತಿನ ವಿರೋಧ ಪಕ್ಷದ ನಾಯಕರಾದ ಮಾನ್ಯ ಹೆಚ್.ಕೆ. ಪಾಟೀಲರಿಗೆ ಬರೆದಿರುವ ಪತ್ರ ಮತ್ತು ಇದಕ್ಕೆ ಮೊದಲು ಮಾನ್ಯ ಹೆಚ್.ಕೆ. ಪಾಟೀಲರು ಘನತೆವೆತ್ತ ರಾಜ್ಯಪಾಲರಿಗೆ ದಿನಾಂಕ 20.9.2006ರಂದು ಬರೆದಿರುವ ಪತ್ರ ಇವೆರಡರ ನಕಲನ್ನು ಇದರ ಜೊತೆಗೆ ಲಗತ್ತಿಸಿ ಇದನ್ನು ದಯವಿಟ್ಟು ಪರಾಮರ್ಶಿಸಿ ಚರ್ಚೆಗೆ ಅವಕಾಶ ಮಾಡಿಕೊಡಬೇಕೆಂದು ವಿನಂತಿಸಿಕೊಂಡು ಇದು ಅತ್ಯಂತ ಪ್ರಮುಖವಾದ ವಿಚಾರವೆಂದು ತಮಗೆ ಪತ್ರವನ್ನು ಬರೆದಿದ್ದಾರೆ. ಯಾವ ನಿಯಮಾವಳಿಯ ಅಡಿಯಲ್ಲಿ ಈ ವಿಚಾರವನ್ನು ಎತ್ತುತ್ತೇವೆಂದು ಇದರಲ್ಲಿ ಪ್ರಸ್ತಾಪ ಮಾಡಿಲ್ಲ. ಯಾವುದಾದರೂ ಒಂದು ವಿಷಯವನ್ನು ಇಲ್ಲಿ ಎತ್ತಬೇಕಾಗಿದ್ದರೆ ನಿಯಮಾವಳಿಗಳ ಅಡಿಯಲ್ಲೇ ಆ ವಿಚಾರವನ್ನು ಎತ್ತಬೇಕಾಗುತ್ತದೆ. ಯಾವ ನಿಯಮಾವಳಿಗಳು ಎಂಬುದನ್ನು ಪ್ರಸ್ತಾಪ ಮಾಡದೇ ಇರುವುದರಿಂದ ಇದರ ಚರ್ಚೆಗೆ ಅವಕಾಶವಿಲ್ಲ ಎಂಬುದು ಒಂದನೆಯದು, ಎರಡನೆಯದು, ಮುಖ್ಯವಾಗಿರತಕ್ಕದ್ದು, ರಾಜ್ಯಪಾಲರು ಮತ್ತೊಬ್ಬ ವ್ಯಕ್ತಿ ಅಥವಾ ವಿರೋಧ ಪಕ್ಷದ ನಾಯಕರೆ ಆಗಿರಬಹುದು, ಅವರ ನಡುವೆ ನಡೆದಿರುವ ಪತ್ರವ್ಯವಹಾರ ಇಲ್ಲಿ ಕೆಳಮನೆಯಲ್ಲಿ ಚರ್ಚೆಗೆ ಅವಕಾಶವಿಲ್ಲ. ಅನೇಕರು ಅನೇಕ ವಿಚಾರಗಳ ಬಗ್ಗೆ ರಾಜ್ಯಪಾಲರಿಗೆ ಪತ್ರವನ್ನು ಬರೆಯುತ್ತಾರೆ. ಏಕೆಂದರೆ ಅವರು ರಾಜ್ಯದ ಘನತೆವೆತ್ತ ರಾಜ್ಯಪಾಲರಾಗಿರುವುದರಿಂದ, ಅನೇಕ ವಿಷಯಗಳ ಬಗ್ಗೆ ಅವರಿಗೆ ಪತ್ರವನ್ನು ಬರೆಯುತ್ತಾರೆ. ಅವರ ನಡುವೆ ಬರೆದಿರತಕ್ಕ ಪತ್ರ ಅದರ ನಕಲು ಯಾರ ಹತ್ತಿರ ಇತ್ತು, ಅದು ಅಧಿಕೃತವೇ ಅಲ್ಲವೇ? ಅದಕ್ಕೆ

ಮಾನ್ಯ ರಾಜ್ಯಪಾಲರು ಅವರಿಗೆ ಒಂದು ಉತ್ತರವನ್ನು ಕೊಟ್ಟಿದ್ದಾರೆ. ಆ ಉತ್ತರವನ್ನೂ ಕೂಡ ಇದರ ಜೊತೆಗೆ ಲಗತ್ತಿಸಿದ್ದಾರೆ. ಆದರೆ ಅದು ನಿಜವಾದದ್ದೊ ಅಲ್ಲವೋ ಎಂಬುದು ನನಗೆ ಗೊತ್ತಿಲ್ಲ. ಆ ಕಾರಣಕ್ಕಾಗಿ ನಮ್ಮ ನಿಯಮಾವಳಿಯ ಪ್ರಕಾರ ರಾಜ್ಯಪಾಲರಿಗೆ ಬರೆದಿರತಕ್ಕ ಪತ್ರ ವ್ಯವಹಾರವನ್ನು ಇಲ್ಲಿ ಚರ್ಚೆ ಮಾಡುವುದಕ್ಕೆ ಅವಕಾಶವಿಲ್ಲ. ಮತ್ತು ಯಾವ ನಿಯಮಾವಳಿಯ ಪ್ರಕಾರವಾಗಿದೆ ಎನ್ನತಕ್ಕದ್ದು ಇಲ್ಲದೇ ಇರುವುದರಿಂದ ಅದನ್ನು ತಾವು ಪರಾಮರ್ಷಿಸಬೇಕಾದ ಅಗತ್ಯವಿಲ್ಲ. ಚರ್ಚೆಗೆ ದಯಮಾಡಿ ಅವಕಾಶ ಕೊಡಬಾರದು ಎಂದು ವಿನಂತಿಸಿಕೊಳ್ಳುತ್ತೇನೆ.

ಶ್ರೀ ಎನ್. ಧರ್ಮಸಿಂಗ್ : ಒಂದು ಪತ್ರವನ್ನು ಕಳುಹಿಸಿ ಎಂದು ಹೇಳಿದ್ದಾರೆ. ಆ ರೀತಿ ಪತ್ರವನ್ನು ಬರೆದಿದ್ದೇವೆ. ಈವತ್ತು ನಮ್ಮ ರಾಜ್ಯದ ಹಿರಿಯ ಸಚಿವರು ಗೃಹ ಮತ್ತು ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರಾದ ಮಾನ್ಯ ಪ್ರಕಾಶ್ ರವರು ಅದು ಅಲ್ಲಿಗೆ ಸೀಮಿತವಾಗಿದೆ ಚರ್ಚೆಗೆ ಅವಕಾಶ ಇಲ್ಲವೆಂದು ಹೇಳಿದ್ದಾರೆ. ಈವತ್ತು ಹೆಚ್.ಕೆ. ಪಾಟೀಲರು ರಾಜ್ಯಪಾಲರಿಗೆ ಬರೆದಂಥ ಪತ್ರವೇನಿದೆ ಬಹಿರಂಗವಾಗಿ ಇಡೀ ರಾಜ್ಯದ ಜನರು ಓದಿದ್ದಾರೆ. ರಾಜ್ಯಪಾಲರೂ ಕೂಡ ಏನು ಹೆಚ್.ಕೆ. ಪಾಟೀಲರಿಗೆ ಉತ್ತರವನ್ನು ಬರೆದಿದ್ದಾರೆ ಅದೂ ಕೂಡ ಪತ್ರಿಕೆಯಲ್ಲಿ ಬಂದಿದೆ. It has become the property of the entire State. ಈವತ್ತು ನಾವು ಸದನದಲ್ಲಿ ಸೇರುತ್ತಿರುವ ಸಮಯದಲ್ಲಿ ರಾಜ್ಯಕ್ಕೆ ಸಂಬಂಧಪಟ್ಟಂತೆ ಸಮಸ್ಯೆಗಳ ಬಗ್ಗೆ ಪತ್ರಗಳ ವ್ಯವಹಾರವೇನಾಗಿದೆ. ಸದನದಲ್ಲಿ ಕುಳಿತಾಗ ಇದರ ಬಗ್ಗೆ ಕೇಳತಕ್ಕ ಹಕ್ಕಿಲ್ಲ ಎನ್ನತಕ್ಕ ರೀತಿಯಲ್ಲಿ ಮಾನ್ಯ ಎಂ.ಪಿ. ಪ್ರಕಾಶ್ ರವರು ಹೇಳಿದ್ದಕ್ಕೆ ವಿಷಾದಿಸುತ್ತೇನೆ. ಈ ರೀತಿಯ ಮಾತನ್ನು ಅವರು ಹೇಳಬಾರದು. ಏಕೆಂದರೆ ಚರ್ಚೆಯಾಗಲಿ, ಈವತ್ತು ಅವಕಾಶ ಕೊಟ್ಟರೆ ಅವೆಲ್ಲವನ್ನೂ ಕೂಡ ಹೇಳುತ್ತೇವೆ. ಅವರೂ ಕೂಡ ಲಾ ಅಂಡ್ ಆರ್ಡರ್ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿಲ್ಲ. ಏನು ಹಗರಣಗಳಾಗಿದೆ. 'I am not satisfied' ಎಂದು ಹೇಳಿದ್ದಾರೆ. ಇದೆಲ್ಲಾ ಕೂಡ ನಡೆಯುತ್ತದೆ ಎಂಬ ಮಾತನ್ನೂ ಕೂಡ ಹೇಳಿದ್ದಾರೆ. ಈವತ್ತು ಈ ಸದನದಲ್ಲಿ ಚರ್ಚೆಯಾಗಬೇಕು. ನಾನು ಗೃಹ ಸಚಿವರಿಗೆ ಹೇಳುತ್ತಿದ್ದೇನೆ. ನಾಳೆ ರಾಜ್ಯಪಾಲರು ಇಲ್ಲಿಗೆ ಬರುತ್ತಿದ್ದಾರೆ. ರಾಜ್ಯಪಾಲರು ಬರತಕ್ಕ ಪೂರ್ವದಲ್ಲಿ ಈವತ್ತು ಅವರು ಏನು ಹೇಳಿದ್ದಾರೆಂದರೆ. I am greatly distrubed by the controversies and allegations and counter allegations of corruption as they are bound to affect directly or indirectly the good governance in the State and faith of the people in democratic system. I am conscious of my responsibility and also of the Constitutiona,l frame work within which the Governance has to function. It has been my endeavour throughout to uphold our Constitutional values and I will continue to do so. ಅಂತ.

(ಅಡಚಣೆ)

ಶ್ರೀ ಆರಗಜ್ಞಾನೇಂದ್ರ : ಮಾನ್ಯ ವಿರೋಧ ಪಕ್ಷದ ನಾಯಕರು ಯಾವ ನಿಯಮದ ಅಡಿಯಲ್ಲಿ ಪ್ರಸ್ತಾಪ ಮಾಡುತ್ತಿದ್ದಾರೆ?

ಶ್ರೀ ಕೆ.ಎಸ್. ಈಶ್ವರಪ್ಪ : ಮಾನ್ಯ ಅಧ್ಯಕ್ಷರೆ, ನನಗೆ ಒಂದು ನಿಮಿಷ ಅವಕಾಶ ಕೊಡಿ. ರಾಜ್ಯಪಾಲರು Constitution Head ಆಗಿದ್ದಾರೆ. ಈ ರಾಜ್ಯದಲ್ಲಿ ಏನೇನು ನಡೆಯುತ್ತಿದೆ ಎಂಬುದು ಗೊತ್ತಿದೆ. ನಾನು ಇದರ ಬಗ್ಗೆ ಬಹಳ ಎಚ್ಚರದಿಂದ ಕ್ರಮ ತೆಗೆದುಕೊಳ್ಳುತ್ತೇನೆಂಬ ಮಾತನ್ನು ಹೇಳಿದ್ದಾರೆ. ಅದಕ್ಕೆ ನಾನು ಹೇಳತಕ್ಕಂಥ ತಾತ್ಪರ್ಯ ಇಷ್ಟೆ. ಇವೊತ್ತು ಘನತೆವೆತ್ತ ಈ ರಾಜ್ಯದ ರಾಜ್ಯಪಾಲರು ಏನು ಪತ್ರವನ್ನು ಬಹಿರಂಗಪಡಿಸಿದ್ದಾರೆ. ಈ ರಾಜ್ಯದ ಜನತೆಗೆ ಏನು ಸಂದೇಶ ಕೊಟ್ಟಿದ್ದಾರೆ. ಇವೊತ್ತಿಗೂ ಸಹ ಮುಖ್ಯಮಂತ್ರಿಗಳ ಮೇಲೆ ಮತ್ತು ಈ ರಾಜ್ಯದ ನಡವಳಿಕೆ ಬಗ್ಗೆ ಏನೇನು ಮಾತುಗಳನ್ನು ಹೇಳಿದ್ದಾರೆ. ನಾವೆಲ್ಲರೂ ಕೂಡ ಇದರ ಬಗ್ಗೆ ವಿಚಾರ ಮಾಡಬೇಕಾಗಿದೆ.

(ಅಡಚಣೆ)

ಶ್ರೀ ಎನ್. ಧರ್ಮಸಿಂಗ್ : ಇವೊತ್ತು ಯಾವ ರೀತಿ ಗಡಿ ಭಾಗದಲ್ಲಿ ತಾವೆಲ್ಲರೂ ಕೂಡ ಸಿದ್ಧತೆ ನಡೆಸುತ್ತಿದ್ದೀರಿ, ಇಂತಹ ಒಂದು ಮಹತ್ವವಾದ ಪತ್ರ ವ್ಯವಹಾರದ ಬಗ್ಗೆ ನಮಗೆ ಮಾತನಾಡಲು ಅನುಮತಿ ಕೊಡಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

(ಅಡಚಣೆ)

ಶ್ರೀ ಕೆ.ಎಸ್. ಈಶ್ವರಪ್ಪ : ಮಾನ್ಯ ಅಧ್ಯಕ್ಷರೆ, ಏನೂ ಇಲ್ಲ. ಬೆಳಗಾವಿಯ ಚಾರಿತ್ರಿಕ ಅಧಿವೇಶನದ ಕಲಾಪವನ್ನು ಇಡೀ ರಾಜ್ಯದ, ದೇಶದ ಜನರು ನೋಡುತ್ತಿರುವಂತಹ ಸಂದರ್ಭದಲ್ಲಿ ಸರ್ವಾನುಮತದಿಂದ ನಿರ್ಣಯವನ್ನು ರಾಜ್ಯದ ಹಿತದೃಷ್ಟಿಯಿಂದ ಕೈಗೊಂಡೆವು. ಇದು ಐತಿಹಾಸಿಕ ಅಧಿವೇಶನ ನಾನು ಏನು ಹೇಳುವುದಕ್ಕೆ ಹೊರಟಿದ್ದೇನೆಂದರೆ, ನಿನ್ನೆ ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡುತ್ತಾ ನೀವು ನಿಯಮಬಾಹಿರವಾಗಿ ಈ ಅಧಿವೇಶವನ್ನು ಕರೆದಿದ್ದೀರೆಂದು ಹಕ್ಕುಚ್ಯುತಿ ಮಂಡನೆ ಮಾಡಿದ ಪ್ರಸಂಗವನ್ನು ನಾವು ಕಂಡೆವು, ನಿನ್ನೆ ನಿಯಮಾವಳಿ ಪ್ರಕಾರ ಅಧಿವೇಶನವನ್ನು ಕರೆದಿದ್ದೀರಿ ಎಂದು ಹೇಳಿದವರು ನೀವಲ್ಲವೇ? ನಿಯಮಬಾಹಿರವಾಗಿ ಅಧಿವೇಶವನ್ನು ಕರೆದಿದ್ದೀರೆಂದು ಹೇಳಿದ್ದೂ ನೀವಲ್ಲವೇ? ಹಾಗಾದರೆ, ಕಾಂಗ್ರೆಸ್ಸಿಗರು ಇದನ್ನು ಒಪ್ಪುತ್ತೀರಾ? ಅಧಿವೇಶವನ್ನು ನಿಯಮಬಾಹಿರವಾಗಿ ಕರೆಯಲಾಗಿದೆ ಎಂದು ಹೇಳಿರುವುದನ್ನು ನೀವು ಒಪ್ಪುತ್ತೀರಾ? ನಾನು ಹೇಳುವುದಕ್ಕೆ ಹೊರಟಿದ್ದೇನೆಂದರೆ, ನಿನ್ನೆ ಮಾತನಾಡುತ್ತಾ ನಿಯಮಬಾಹಿರವಾಗಿ ಅಧಿವೇಶನ ಕರೆಯಲಾಗಿದೆಯೆಂದು ಕೂಡಿ ಆ ಪುಸ್ತಕವನ್ನು ಹರಿದು ಎಸೆದು ಹಕ್ಕುಚ್ಯುತಿ ಬಗ್ಗೆ ಮಾತನಾಡಿದಂತಹ ಕಾಂಗ್ರೆಸ್ ನಾಯಕರು

ಇವೊತ್ತು ನಿಯಮಬಾಹಿರವಾಗಿ ಒಂದು ಪತ್ರ ಬರೆದು ಅದನ್ನು ನೀವು ಚರ್ಚೆಗೆ ತೆಗೆದುಕೊಳ್ಳಬೇಕೆಂದು ಹೇಳುತ್ತಿದ್ದಾರಲ್ಲಾ, ಇವರಿಗೇನಾದರೂ ನೀತಿ–ನಿಯಮ, ನ್ಯಾಯ ಇದೆಯೇ ಎಂದು ಕೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಎನ್. ಧರ್ಮಸಿಂಗ್ : ಮಾನ್ಯ ಅಧ್ಯಕ್ಷರೆ, ಮಾನ್ಯ ಈಶ್ವರಪ್ಪನವರ ಮಾತಿಗೆ ಕಡಿವಾಣ ಹಾಕಬೇಕು. ರಾಜ್ಯಪಾಲರು ಹೆಚ್.ಕೆ. ಪಾಟೀಲ್ ಅವರಿಗೆ ಬರೆದಂತಹ ಪತ್ರದ ಬಗ್ಗೆ ಅವರು ಹೇಳುತ್ತಿದ್ದಾರೆ. ಇದರ ಬಗ್ಗೆ ಅವರಾಡಿದ ಮಾತಿಗೆ ತಾವು ಕಡಿವಾಣ ಹಾಕಬೇಕು, ರಾಜ್ಯಪಾಲರು ಹೆಚ್.ಕೆ. ಪಾಟೀಲರಿಗೆ ಪತ್ರ ಬರೆದಿದ್ದು, ಪತ್ರದಲ್ಲಿ ರಾಜ್ಯಪಾಲರು ಯಾವ ಮಾತುಗಳನ್ನು ಪ್ರಸ್ತಾಪಿಸಿದ್ದಾರೆಂಬುದನ್ನು ಹೇಳಿದ್ದಾರೆ. ಇವೊತ್ತು ಅವರು ಏನು ಹೇಳಿದ್ದಾರೆಂದರೆ, ರಾಜ್ಯಪಾಲರು ಬರೆದಂತಹ ಪತ್ರ ಕೂಡ ನಿಯಮಬಾಹಿರವೆಂದು ಹೇಳಿದ್ದಾರೆ. ಇದಕ್ಕೆ ನಮ್ಮ ಆಕ್ಷೇಪಣೆ ಇದೆ.

(ಅಡಚಣೆ)

ಶ್ರೀ ಕೆ.ಎಸ್. ಈಶ್ವರಪ್ಪ : ನಿನ್ನೆ ಇಡೀ ಕರ್ನಾಟಕದ ಜನರು ಇವರ ನಡವಳಿಕೆ ಎಷ್ಟರಮಟ್ಟಿಗೆ ಇದೆಯೆಂಬುದನ್ನು ನೋಡಿದ್ದಾರೆ. ಇದೊಂದು ಐತಿಹಾಸಿಕ ಅಧಿವೇಶನ. ಈ ಅಧಿವೇಶನದಲ್ಲಿ ಕರ್ನಾಟಕ ರಾಜ್ಯದ ಜನರು ಏನು ಅಪೇಕ್ಷೆ ಪಡುತ್ತಿದ್ದಾರೆನ್ನುವುದು ನಮ್ಮೆಲ್ಲಾ ಹಿರಿಯ ನಾಯಕರಿಗೆ ಗೊತ್ತಿದೆ. ಅವರೆಲ್ಲರೂ ಮಂತ್ರಿಗಳಾಗಿದ್ದವರು, ಹೀಗಾಗಿ, ಈ ಅಧಿವೇಶನ ಒಂದು ರೀತಿಯ ವಿಶೇಷ ಅಧಿವೇಶನ ಆಗಬೇಕು. ಆ ದಿಕ್ಕಿನಲ್ಲಿ ಅವರು ಸರ್ಕಾರಕ್ಕೆ ಮಾರ್ಗದರ್ಶನ ಮಾಡಬೇಕು. ಅದು ಬಿಟ್ಟು ಹರಿದು ಹಾಕುವುದು, ಕಾನೂನು ಪುಸ್ತಕಗಳನ್ನು ಎಸೆಯುವುದು ಮಾಡಿದರೆ ಹೊಸ ಶಾಸಕರು ಇವರನ್ನು ನೋಡಿ ಛೀಮಾರಿ ಹಾಕುತ್ತಾರೆ. ಈ ರಾಜ್ಯದ ಜನರು ಕಾಂಗ್ರೆಸ್ಸಿಗರಿಗೆ ಛೀಮಾರಿ ಹಾಕುತ್ತಾರೆ. ನಾನು ಅದಕ್ಕೋಸ್ಕರ ಮನವಿ ಮಾಡುತ್ತೇನೆ.

(ಅಡಚಣೆ)

ಶ್ರೀ ಕೆ.ಎಸ್. ಈಶ್ವರಪ್ಪ : ನಿನ್ನೆ ಇವರು ಯಾವ ರೀತಿ ನಡೆದುಕೊಂಡರು ಎಂಬುದು ಎಲ್ಲಾ ಪತ್ರಿಕೆಗಳಲ್ಲೂ ಬಂದಿದೆ. ಪತ್ರಿಕೆಗಳ ಮುಖಪುಟದಲ್ಲಿ ನಿಮ್ಮ ನಡವಳಿಕೆ, ಫೋಟೋ ಸಮೇತ ಬಂದಿದೆ. ಮಾನ್ಯ ಅಧ್ಯಕ್ಷರೆ, ನಿನ್ನೆ ಕಾಂಗ್ರೆಸ್ಸಿಗರು ವಿಶೇಷ ಅಧಿವೇಶನದಲ್ಲಿ ಯಾವ ರೀತಿ ನಡೆದುಕೊಂಡರು ಎಂಬುದು ಅವರುಗಳ ಫೋಟೋ ಸಮೇತ ಬಂದಿದೆ. ಇವರು ಎಸೆದದ್ದು, ಹರಿದು ಹಾಕಿದ್ದನ್ನು ರಾಜ್ಯದ ಜನರು ಕಂಡು, ಕಾಂಗ್ರೆಸ್ಸಿಗರಿಗೆ ಈ ಅಧಿವೇಶನವನ್ನು ಯಾವ ರೀತಿ ನಡೆಸಬೇಕೆನ್ನುವಂತಹ ಜ್ಞಾನವಿಲ್ಲವೇ ಎಂದು ಛೀಮಾರಿ ಹಾಕುತ್ತಿದ್ದಾರೆ.

(ಅಡಚಣೆ)

ಶ್ರೀ ಕೆ.ಎಸ್. ಈಶ್ವರಪ್ಪ : ನಾನು ಅದಕ್ಕೋಸ್ಕರ ಈಗಲೂ ಮನವಿ ಮಾಡುತ್ತೇನೆ.

ದಯವಿಟ್ಟು, ಇದೊಂದು ಐತಿಹಾಸಿಕ ಅಧಿವೇಶನ ಆಗಬೇಕಾಗಿದೆ. ರಾಜ್ಯದ ಜನರಿಗೆ ಈ ವಿಧಾನಮಂಡಲದ ವಿಶೇಷ ಅಧಿವೇಶನವೆಂದು ತೀರ್ಮಾನವಾಗಬೇಕಾದರೆ, ಉತ್ತರ ಕರ್ನಾಟಕದ ಭಾಗದ ಅಭಿವೃದ್ಧಿಗೆ ನೀವು ಏನು ಸಲಹೆಗಳನ್ನು ಕೊಡುತ್ತೀರೋ, ಕೊಡಿ, ಮುಖ್ಯಮಂತ್ರಿಗಳು, ಉಪ ಮುಖ್ಯಮಂತ್ರಿಗಳು, ಈ ಸರ್ಕಾರ, ನಿಮ್ಮ ಸಲಹೆಗಳನ್ನು ತೆಗೆದುಕೊಳ್ಳುವುದಕ್ಕೆ ತಯಾರಿದ್ದೇವೆ, ಅಭಿವೃದ್ಧಿ ಮಾಡುವುದಕ್ಕೆ ತಯಾರಿದ್ದೇವೆ, ಈ ನಿಟ್ಟಿನಲ್ಲಿ ಅಭಿಪ್ರಾಯ, ಸಲಹೆಗಳನ್ನು ಕೊಡುವುದು ಬಿಟ್ಟು ಹರಿದು ಹಾಕುವುದು, ಕಿತ್ತಾಕುವುದು ಮಾಡಿದರೆ, ಇದು ನಿಮ್ಮ ಕಾಂಗ್ರೆಸ್ ಸಂಸ್ಕೃತಿಯನ್ನು ತೋರಿಸುತ್ತದೆ. ಹಾಗಾಗಿ, ನಾನು ಪ್ರಾರ್ಥಿಸಿಕೊಳ್ಳುತ್ತೇನೆ. ಕರ್ನಾಟಕ ರಾಜ್ಯದ ಜನರಿಗೆ ವಿಶೇಷವಾದ ಅಧಿವೇಶನದಲ್ಲಿ ಮಾರ್ಗದರ್ಶನ ತೋರಿಸಿ. ಈ ರಾಜ್ಯದ ಹಿತದೃಷ್ಟಿಯಿಂದ ನೀವು ಅವಕಾಶ ಮಾಡಿಕೊಡಬೇಕೆಂದು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಆರ್.ಎ. ದೇಶಪಾಂಡೆ : ಮಾನ್ಯ ಅಧ್ಯಕ್ಷರೆ, ಈಗ ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡುತ್ತಾ, ನಿನ್ನೆ ಹೆಚ್.ಕೆ. ಪಾಟೀಲರು ಬರೆದ ಪತ್ರ ಮತ್ತು ಅದಕ್ಕೆ ರಾಜ್ಯಪಾಲರು ಕೊಟ್ಟ ಉತ್ತರದ ಬಗ್ಗೆ ಪ್ರಸ್ತಾಪಿಸಿದರು, ಮಾನ್ಯ ಗೌರವಾನ್ವಿತ ಗೃಹ ಸಚಿವರು ಇದಕ್ಕೆ ಪ್ರತಿಕ್ರಿಯಿಸುತ್ತಾ, ಇದರ ಮೇಲೆ ಪ್ರಸ್ತಾಪ ಮಾಡುವುದಕ್ಕೆ ಬರುವುದಿಲ್ಲವೆಂದರು, ಇದಕ್ಕೆ ಎರಡು ಕಾರಣಗಳು. ಮೊದಲನೆಯದಾಗಿ, ಟೆಕ್ನಿಕಲ್ ಆಗಿ ಯಾವ ರೂಲ್ ಎಂದು ಪ್ರಸ್ತಾಪ ಮಾಡಿಲ್ಲ. ಎರಡನೆಯದು, ಗವರ್ನರ್ ಮತ್ತು ಒಬ್ಬ ವ್ಯಕ್ತಿಯ ಪತ್ರ ವ್ಯವಹರ ಆಗುತ್ತದೆ, ಆ ಪತ್ರ ವ್ಯವಹಾರದ ಬಗ್ಗೆ ಚರ್ಚೆ ಮಾಡುವುದಕ್ಕೆ ಬರುವುದಿಲ್ಲವೆಂದು ಹೇಳಿದರು. ಈಗ ಈ ಪತ್ರ ಬಹಿರಂಗವಾಗಿದೆ. ಇದನ್ನು ನಾವು ಬಹಿರಂಗಪಡಿಸಿಲ್ಲ. ಎಲ್ಲಾ ಪತ್ರಿಕೆಗಳಲ್ಲೂ ಗವರ್ನರ್ ತಮ್ಮ ಪತ್ರದಲ್ಲಿ ಏನು ಬರೆದಿದ್ದರು ಎಂಬುದು ಬಂದಿದೆ. ಹಾಗಾಗಿ, ಪತ್ರಿಕೆಗಳಲ್ಲಿ ಬಂದಾಗ ಆ ವಿಷಯವನ್ನು ಚರ್ಚೆ ಮಾಡುವುದಕ್ಕೆ ಇವೆಲ್ಲವನ್ನೂ ಕೇಳುವುದಕ್ಕೆ ಬರುವುದಿಲ್ಲ ಎಂದಿರಿ. ಮೂರನೆಯದಾಗಿ, ತಮ್ಮ ಗಮನಕ್ಕೆ ತರುತ್ತಿದ್ದೇನೆ. ನಿನ್ನೆ ನಾವು ಇದನ್ನು ಪ್ರಸ್ತಾಪ ಮಾಡುವಾಗ ತಾವು ಒಂದು ಸಲಹೆ ಕೊಟ್ಟಿರಿ. ಆ ಪತ್ರದ ಉತ್ತರವನ್ನು ನನಗೆ ಕಳುಹಿಸಿ ಎಂದು ಹೇಳಿದಿರಿ. ಇವೊತ್ತು 'ನೀವು ರೂಲ್ ಕೋಟ್ ಮಾಡಿಲ್ಲ'ವೆಂದು ತಾವು ಹೇಳುತ್ತಿದ್ದೀರಿ. ಅಧ್ಯಕ್ಷರೆ, ತಾವು ಇಲ್ಲಿ ಕುಳಿತಾಗ ಇಡೀ ರಾಜ್ಯದ ಹಿತವನ್ನು ಗಮನದಲ್ಲಿಟ್ಟುಕೊಂಡು ಕೆಲಸ ಮಾಡುತ್ತೀರಿ. ಒಬ್ಬ ರಾಜ್ಯಪಾಲರು ಭ್ರಷ್ಟಾಚಾರ ಮತ್ತು ಪೊಲೀಸ್ ಇಲಾಕೆ ಬಗ್ಗೆ ತಮ್ಮ ಸಂದೇಹ, ಸಂಶಯ, ಕನ್‌ಸರ್ನ್, ವ್ಯಕ್ತಪಡಿಸಿದಾಗ, ಅದಕ್ಕೆ ನೀವು ಟೆಕ್ನಿಕಲ್ ಪ್ರಾಬ್ಲಮ್ ಎತ್ತುವ ಮೂಲಕ ವಿಷಯವನ್ನು ಚರ್ಚೆ ಮಾಡುವುದಕ್ಕೆ ಬರುವುದಿಲ್ಲವೆಂದರೆ, ತಪ್ಪಾಗಬಹುದೆಂದು ನಾನು ಭಾವಿಸುತ್ತೇನೆ.

(ಅಡಚಣೆ)

11.50

ಶ್ರೀ ಆರ್.ವಿ. ದೇಶಪಾಂಡೆ : ಮಾನ್ಯ ಅಧ್ಯಕ್ಷರೆ, ಇದು ಸರಿಯಲ್ಲ, ನಾವು ಖಂಡಿಸುತ್ತೇವೆ, ನಿನ್ನೆಯೇ ನಾವು ಹೇಳಿದ್ದೇವೆ, ಇವೊತ್ತು ಸಹ ಇದು ಸರಿಯಲ್ಲವೆಂದು ಹೇಳುತ್ತಿದ್ದೇವೆ. ಎರಡನೆಯ ವಿಚಾರ, ಈಗ ನಮ್ಮ ಸ್ನೇಹಿತರಾದ ಮಾನ್ಯ ಈಶ್ವರಪ್ಪನವರು....

ಶ್ರೀ ಎಂ.ಪಿ. ರೇಣುಕಾಚಾರ್ಯ : ನಿಮಗೆ ಯಾವುದೇ ನೈತಿಕ ಹಕ್ಕಿಲ್ಲ.

ಅಧ್ಯಕ್ಷರು : ಕುಳಿತುಕೊಳ್ಳಿ.

ಶ್ರೀ ಆರ್.ವಿ. ದೇಶಪಾಂಡೆ : ಮಾನ್ಯ ಈಶ್ವರಪ್ಪನವರು ಮಾತನಾಡುತ್ತಾ, ಇಲ್ಲಿ ನಿಮಗೆ ಭೀಮಾರಿ ಹಾಕುತ್ತಾರೆ. ನೀವು ಅಭಿವೃದ್ಧಿ ಬಗ್ಗೆ ಏನೂ ಚಿಂತನೆ ಮಾಡುತ್ತಿಲ್ಲವೆಂದರು. ನಾನು ಹೇಳುತ್ತೇನೆ. ನೀವು ಉತ್ತರ ಕರ್ನಾಟಕಕ್ಕೆ ಬಂದಿರಿ. ಬೆಳಗಾವಿಯಲ್ಲಿ ಒಂದು ಐತಿಹಾಸಿಕ ಅಧಿವೇಶನ ಮಾಡುವುದಕ್ಕೆ ನಿರ್ಣಯ ಮಾಡಿದಿರಿ. ನಾವು ಬೆಂಬಲ ಕೊಟ್ಟೆವು.

ಶ್ರೀ ಎಂ.ಪಿ. ರೇಣುಕಾಚಾರ್ಯ : ನಿಮಗೆ ಇದನ್ನು ಸಹಿಸುವುದಕ್ಕಾಗುವುದಿಲ್ಲ.

ಶ್ರೀ ಆರ್.ವಿ. ದೇಶಪಾಂಡೆ : ನಾವು ಸ್ವಾಗತ ಮಾಡಿದೆವು. ನಿಮ್ಮ ಅಜೆಂಡಾ ಏನು? ಇವೊತ್ತು ಯಾವುದು ಅಭಿವೃದ್ಧಿ ಬಗ್ಗೆ ಇದೆ. ನೀವು ಗವರ್ನಮೆಂಟ್ ಬಿಸಿನೆಸ್ ಅಜೆಂಡಾದಲ್ಲಿ ಇವೊತ್ತು ಹಾಕಿ ಎಲ್ಲಾ ಬಿಲ್‌ಗಳನ್ನೂ ಪಾಸ್ ಮಾಡಿಕೊಂಡು ಹೋದಿರಿ. ಅಜೆಂಡಾದಲ್ಲಿ ಬರಗಾಲದ ವಿಷಯ ಎಲ್ಲಿದೆ? ಬರಗಾಲದಲ್ಲಿ ನಿಮ್ಮ importance ಏನು? ಇವೊತ್ತಿನ ಕಾರ್ಯಸೂಚಿಯಲ್ಲಿ ಕೊನೆಯ ವಿಷಯವಾಗಿ ಬರಗಾಲದ ಬಗ್ಗೆ ಇದೆ. ಕಾಂಗ್ರೆಸ್ ಪಕ್ಷದವರಾದ ನಾವು ಮೊದಲು ಕೊಟ್ಟಿದ್ದೇವೆ. Office of Profit Bill, Greater Bangalore ಇದರ ಬಗ್ಗೆ ಮಾತ್ರ ನಿಮಗೆ ಚಿಂತನೆ ಇದೆ. ಇಲ್ಲಿಗೆ ಬಂದು ನೀವು ಚಿಂತನೆ ಮಾಡುವುದು ಬೋರ್ಡ್ ಕಾರ್ಪೋರೇಷನ್ ಫೇರ್ಮನ ಮಾಡುವ ಬಗ್ಗೆ ಹಾಗೂ ಬೆಂಗಳೂರಿನ ಬಗ್ಗೆ. ಉಳಿದ ವಿಷಯಗಳ ಬಗ್ಗೆ ನೀವೇನು ಚಿಂತನೆ ಮಾಡಿದ್ದೀರಿ?

SRI M.P. PRAKASH : I am on a point of order. ನಾನು ಕ್ರಿಯಾಲೋಪವೆತ್ತಿದ್ದೇನೆ. ತಾವು ಅವಕಾಶ ಕೊಟ್ಟರಿ. ಮಾನ್ಯ ದೇಶಪಾಂಡೆವರು ಮಾತನಾಡಿರುವ ವಿಚಾರದಲ್ಲಿ ಈಗ ಮಾನ್ಯ ವಿರೋಧ ಪಕ್ಷದ ನಾಯಕರು ಕೊಟ್ಟರತಕ್ಕಂಥಾದ್ದರ ಬಗ್ಗೆ ತಾವು ತಾಂತ್ರಿಕವಾಗಿ ಆಕ್ಷೇಪವೆತ್ತಿದ್ದೀರಿ. ಅದರ ಬಗ್ಗೆ ಅವರು ಮಾತನಾಡುವ ಸನ್ನಿವೇಶದಲ್ಲಿ ಗಡಿಬಿಡಿಯಾಗಿರುವುದು. ಸಹಜ. ಮತ್ತು ಅದು ಅಲ್ಲಿಗೇ ನಿಶ್ಯಬ್ದವಾಗುತ್ತದೆ. ಆದರೆ, ಅವರು ಮಾತನಾಡುವ ಸಂದರ್ಭದಲ್ಲಿ ಇದಕ್ಕೆ ಸಂಬಂಧಿಸಿರತಕ್ಕ ವಿಷಯಗಳನ್ನು ಮಾತ್ರ ಪ್ರಸ್ತಾಪ ಮಾಡಬೇಕೇ ವಿನಾ ಕಾರ್ಯಸೂಚಿಯಲ್ಲಿ ಏನಿದೆ, ಬರಗಾಲದ ವಿಷಯದಲ್ಲಿ..... I am on a point of order

(ಅಡಚಣೆ)

ಶ್ರೀ ಎಂ.ಪಿ. ಪ್ರಕಾಶ್ : ತಾವು ಯಾರೂ ಮಾತನಾಡಿಲ್ಲ. ತಾವು ಹಿರಿಯರಿದ್ದೀರಿ. ಆ ಕಾರಣಕ್ಕಾಗಿ ಇದರ ಬಗ್ಗೆ ತಾವು ಮನವರಿಕೆ ಮಾಡಿಕೊಂಡು ನಿಯಮಾವಳಿಯನ್ನು.... ಅದು ಅಕಸ್ಮಾತ್ ಆಗಿದ್ದರೂ ಕೂಡ ಯಾವುದೇ ಭಾವೋದ್ವೇಗದಿಂದ ಆಗಿರಬಹುದು. ನಾನು ತಿಳಿದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇನೆ. ನಿಯಮಾವಳಿ ಪ್ರಕಾರ ತಿಳಿದುಕೊಳ್ಳುವುದಕ್ಕೆ ನಾವು ಪ್ರಯತ್ನ ಮಾಡೋಣ, ನೀವು ಪ್ರಯತ್ನ ಮಾಡಿಸಿ. ಯಾರಿಗೂ ಕೂಡ ಇದರ ಬಗ್ಗೆ ಸಂಪೂರ್ಣ ಪರಿಜ್ಞಾನ ಇದೆಯೆಂದಲ್ಲ. ಸದನದಲ್ಲಿ ನಡೆಯುವ ವಿಷಯದಲ್ಲಿ ಈ ವಿಚಾರ ಬಂದಾಗ ಮಾತ್ರ ಅದಕ್ಕೆ ಸಂಬಂಧಪಟ್ಟದ್ದನ್ನು ತಾವು ಹೇಳಿ. ನಾವು ನಿಮ್ಮನ್ನು ಕನ್‌ವಿನ್ಸ್ ಮಾಡುವುದಕ್ಕೆ ನೋಡುತ್ತೇವೆ. ಮಾನ್ಯ ಸ್ಪೀಕರ್ ಅವರನ್ನು ಕನ್‌ವಿನ್ಸ್ ಮಾಡುವುದಕ್ಕೆ ನೋಡುತ್ತೇವೆ. ಆದಾದ ನಂತರ ಅಂತಿಮ ನಿರ್ಣಯ ನೀವು ಏನು ಕೊಡುತ್ತೀರೋ, ಅದರಂತೆ ನಡೆದುಕೊಳ್ಳೋಣ. ಗದ್ದಲ ಮಾಡಬೇಕಾದ ಅಗತ್ಯವಿಲ್ಲ.

ಶ್ರೀ ಎನ್. ಧರ್ಮಸಿಂಗ್ : ಗದ್ದಲ ಯಾರು ಮಾಡುತ್ತಾರೆ?

ಶ್ರೀ ಎಂ.ಪಿ. ಪ್ರಕಾಶ್ : ಗದ್ದಲವನ್ನು ಯಾರೂ ಮಾಡಬಾರದು.

ಶ್ರೀ ಎಂ.ಪಿ. ವೆಂಕಟೇಶ್ : ಬೆಂಗಳೂರಿನಲ್ಲಿ ಅಧಿವೇಶನ ನಡೆಯುವಾಗ ರಾಜ್ಯಪಾಲರ ಭಾಷಣದ ಮೇಲೆ ವಂದನಾರ್ಪಣೆ ಸಲ್ಲಿಸುವ ವಿಷಯದಲ್ಲಿ ಏಕೆ ಗೌರವ ಕೊಡಲಿಲ್ಲ?

ಅಧ್ಯಕ್ಷರು : ಮಾನ್ಯ ವೆಂಕಟೇಶ್‌ರವರೆ, ಈಗ ತಾವು ಕುಳಿತುಕೊಳ್ಳಿ ಮಾನ್ಯ ಖರ್ಗೆಯವರು ಮಾತನಾಡುತ್ತಾರೆ. ಖರ್ಗೆಯವರೆ ತಾವು ಮಾತನಾಡಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ(ಗುರುಮಿಠಕಲ್) : ಮಾನ್ಯ ಅಧ್ಯಕ್ಷರೆ, ಈಗ ರಾಜ್ಯಪಾಲರ ಪತ್ರದ ಮೇಲೆ ಚರ್ಚೆ ಆಗಬೇಕೋ ಅಥವಾ ಬೇಡವೋ ಎನ್ನತಕ್ಕಂಥ ವಿಷಯವನ್ನು ತೆಗೆದುಕೊಂಡು ನಾವೆಲ್ಲರೂ ಇಲ್ಲಿ ಪರ ಮತ್ತು ವಿರೋಧದ ಮಾತನಾಡುತ್ತಿದ್ದೇವೆ. ಮಾನ್ಯ ಎಂ.ಪಿ. ಪ್ರಕಾಶ್‌ರವರು ಈಗಾಗಲೇ ರೂಲ್‌ಕೋಟ್ ಮಾಡಿಹೇಳಿದರು. ಮೇಲ್ಮನೆ ಸದಸ್ಯರೊಬ್ಬರು ರಾಜ್ಯಪಾಲರಿಗೆ ಬರೆದ ಪತ್ರ ಮತ್ತು ಆ ಪತ್ರಕ್ಕೆ ರಾಜ್ಯಪಾಲರ ಉತ್ತರ ಅವರಿಬ್ಬರ ಮಧ್ಯೆ ನಡೆದಿರತಕ್ಕಂಥದ್ದು. ಅದನ್ನು ಚರ್ಚೆಗೆ ತೆಗೆದುಕೊಳ್ಳಲು ಬರುವುದಿಲ್ಲ ಎನ್ನತಕ್ಕಂಥ ಮಾತನ್ನು ಹೇಳಿದರು. ಇನ್ನು ಎರಡನೆಯದಾಗಿ ಯಾವ ರೂಲ್ ಕೆಳಗಡೆ ತೆಗೆದುಕೊಳ್ಳಬೇಕು ಎಂಬುದನ್ನೂ ಕೂಡ ನಾವು ಕೊಟ್ಟ ಪತ್ರದಲ್ಲಿ ಮೆನ್‌ಷನ್ ಮಾಡಿಲ್ಲವೆಂದರು. ಅದಕ್ಕಾಗಿ ಅದನ್ನು ಯಾವ ರೂಲ್‌ನಲ್ಲಿ ಚರ್ಚೆಗೆ

ತೆಗೆದುಕೊಳ್ಳಬೇಕೆಂದು ಸ್ಪಷ್ಟವಾಗಿ ಹೇಳದ ಕಾರಣ ಅದನ್ನು ತೆಗೆದುಕೊಳ್ಳುವ ಅವಶ್ಯಕತೆ ಇಲ್ಲವೆಂದು ಹೇಳಿದರು. ಮಾನ್ಯ ಅಧ್ಯಕ್ಷರೆ, ನಿನ್ನೆಯ ದಿವಸ ನಾವು ಚರ್ಚೆಗೆ ಈ ವಿಷಯವನ್ನು ಎತ್ತಿಕೊಂಡಾಗ ತಾವು ಸಹಜವಾಗಿ ಹೇಳಿದಿರಿ. ನೀವು ಬರೆದು ಕಳುಹಿಸಿ, ಅದನ್ನು ನಾಳೆ ತೆಗೆದುಕೊಳ್ಳೋಣ ಎನ್ನತಕ್ಕಂಥ ಮಾತನ್ನು ಹೇಳಿದ್ದು ನಿಜ ಅದರ ಪ್ರಕಾರ ಒಂದು ಕವರಿಂಗ್ ಲೆಟರ್ ಹಾಕಿ, ಇದನ್ನು ನಾಳೆ ಚರ್ಚೆಗೆ ತೆಗೆದುಕೊಳ್ಳಬೇಕೆಂದು ಆ ಪತ್ರ ಮತ್ತು ಅದರ ಜೊತೆಯಲ್ಲಿ ಕವರಿಂಗ್ ಲೆಟರ್‌ನ್ನು ಹಾಕಿ ತಮಗೆ ಕೊಟ್ಟಿದ್ದೇವೆ. ಆದರೆ ಆ ಕವರಿಂಗ್ ಲೆಟರ್‌ನಲ್ಲಿ ರೂಲ್ ಮೆನ್‌ಷನ್ ಮಾಡಿಲ್ಲ ಎಂದು ಹೇಳಿ technical grounds ಮೇಲೆ ತಾವು ರಿಜೆಕ್ಟ್ ಮಾಡಿದರೆ ತಪ್ಪಾಗುತ್ತದೆ. ಕಾರಣ ಇಷ್ಟೆ, ತಮ್ಮ ಅನಿಸಿಕೆ ಮೇರೆಗೆ, ತಮ್ಮ ಸಲಹೆ ಮೇರೆಗೆ ನೇರವಾಗಿ with the understanding that this will be taken up for discussion tomorrow ಎಂಬ ಭಾವನೆಯಿಂದ ತಮಗೆ ಪತ್ರವನ್ನು ಬರೆದಿದ್ದೇವೆ. ರೂಲ್ ಪ್ರಕಾರ ತರಬೇಕೆಂದರೆ, ರೂಲ್ 363 ರಲ್ಲಿ ತಮಗೆ residuary powers ಕೂಡ ಇದೆ. ರೂಲ್ 363 ರಲ್ಲಿ ಏನು ಹೇಳಲಾಗಿದೆಯೆಂದರೆ, All matters not specifically provided for in these rules and all questions relating to the detailed working of these rules shall be regulated in such manner as the Speaker may from time to time direct. So, in the interest of public, in the interest of people of Karnataka, You can regulate under this rule. ರೂಲ್ 363 ರಲ್ಲಿ ತಮಗೆ ಸಂಪೂರ್ಣವಾಗಿ ಅಧಿಕಾರವಿದೆ. ಈ ಕಾನೂನು ಮತ್ತು ರೂಲ್ಸ್‌ನ್ನು ಬಿಟ್ಟು ನೇರವಾಗಿ ಅಧಿಕಾರವನ್ನು ಬಳಸಿಕೊಂಡು ನೀವು ನಮಗೆ ಪರ್ಮಿಷನ್ ಕೊಡಬಹುದು. ಅದೂ ನಾವು ಮನಸ್ಸು ಮಾಡಿದರೆ ಮಾತ್ರ ಆ ರೀತಿಯಲ್ಲಿ ಮನಸ್ಸು ಮಾಡುವುದಕ್ಕೆ ತಮಗೆ ರೂಲ್‌ನಲ್ಲಿ ಅವಕಾಶವಿದೆ. ತಾವು ಕೂಡ ದಯವಿಟ್ಟು ಟೆಕ್ನಿಕಲ್ ರೀಸನ್ ಹೇಳುವುದಕ್ಕೆ ಹೋಗಬೇಡಿ. ಸರ್ಕಾರದವರೇನೋ ಟೆಕ್ನಿಕಲ್ ರೀಸನ್ ಎಂದು ಹೇಳಿಬಿಟ್ಟರು. ರಾಜ್ಯಪಾಲರು ಬರೆದ ಪತ್ರ ಅವರಿಗೆ ಸರಿ ಕಾಣುವುದಿಲ್ಲ. ಅದರಲ್ಲಿ ಅವರು ಅಡ್ಮಿನಿಸ್ಟ್ರೇಷನ್ ಅಥವಾ ಕರೆಪ್‌ಷನ್ ಬಗ್ಗೆ ಹೇಳಿರಬಹುದು. ಬೇರೆ ಬೇರೆ ವಿಷಯದ ಬಗ್ಗೆ ಅವರು ಪ್ರಸ್ತಾಪ ಮಾಡಿರುವುದರಿಂದ ನ್ಯಾಚುರಲಿ ಅವರಿಗೆ ಮುಜುಗರವಾಗುತ್ತದೆ. ಅದು ಚರ್ಚೆಗೆ ಬೇಡವೆಂದು ಹೇಳತಕ್ಕದ್ದು ಸಹಜ. ನಾವು ನಿನ್ನೆ ಕೊಟ್ಟಂಥ ಪತ್ರದಲ್ಲಿ ವಿಷಯದ ಚರ್ಚೆಗೆ ಯಾವ ನಿಯಮದ ಕೆಳಗಡೆ ತೆಗೆದುಕೊಳ್ಳಬೇಕು. ರೂಲ್ 69 ರಡಿಯಲ್ಲಿ ತೆಗೆದುಕೊಳ್ಳಬೇಕೋ. ಯಾವ ನಿಯಮದ ಕೆಳಗೆ ತೆಗೆದುಕೊಳ್ಳಬೇಕು ಎಂಬುದನ್ನು ಕೋಟ್ ಮಾಡದೇ ಇರಬಹುದು. ಆದರೆ ತಮಗೆ ರೂಲ್ 363 ರಲ್ಲಿ residuary powers ಇದೆ. ದಯವಿಟ್ಟು, ಆ ಅಧಿಕಾರವನ್ನು ಉಪಯೋಗ ಮಾಡಿ ಅವರಿಗೆ ಮಾತನಾಡುವುದಕ್ಕೆ ಅವಕಾಶ ಮಾಡಿಕೊಟ್ಟು

12.00

ಸದನದಲ್ಲಿ ಪರ ವಿರೋಧ ಮಾಡಿಕೊಂಡು ಕುಸ್ತಿ ಮಾಡುವುದು ಬೇಡ. ಸದನ ನಡೆಯುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಏಕೆಂದರೆ ನಿನ್ನೆಯ ದಿವಸ ನಾವು ರಾತ್ರಿ 11.20 ರವರೆಗೆ ಚರ್ಚೆಯಲ್ಲಿ ಪಾಲ್ಗೊಂಡು ಮಾತನಾಡಿದ್ದೇವೆ. ಆದರೂ ಕೂಡ ಅಷ್ಟೊಂದು ಉತ್ತಮವಾಗಿ ಚರ್ಚೆ ನಡೆದರೂ ಸದನದಲ್ಲಿ ಕುಳಿತು ಚರ್ಚೆಯಲ್ಲಿ ಸಹಕರಿಸಿದ್ದೇವೆ. ನಿನ್ನೆ ಮುಂಜಾನೆ 11.00 ಗಂಟೆಯಿಂದ ರಾತ್ರಿ 11.20 ರವರೆಗೆ ಚರ್ಚೆಯಲ್ಲಿ ಪಾಲ್ಗೊಂಡು ಮಾತನಾಡಿದ್ದೇವೆ. ಆದರೂ ಕೂಡ ಅಷ್ಟೊಂದು ಉತ್ತಮವಾಗಿ ಚರ್ಚೆ ನಡೆದರೂ ಪತ್ರಿಕೆಯಲ್ಲಿ ಯಾವುದೂ ಬರಲಿಲ್ಲ. ಆದರೆ ಪತ್ರಿಕೆಯಲ್ಲಿ ನಮಗೆ ಎಷ್ಟು ಮಸಿ ಬಳಿಯಬೇಕೋ ಅಷ್ಟು ಬಂತೇ ಹೊರತಾಗಿ, 12 ತಾಸು ನಡೆದ ಚರ್ಚೆಯಲ್ಲಿ ಬೆವರು ಸುರಿಸಿ ಇಲ್ಲಿ ಕುಳಿತು ಮಾತನಾಡಿ ವಿಷಯವಾರು ಚರ್ಚೆಯಲ್ಲಿ ಅಭ್ಯಾಸ ಮಾಡಿ ಇಲ್ಲಿ ಬಂದು ಹೇಳಿದ್ದರೂ, ಅದಕ್ಕೆ ಬೆಲೆ ಸಿಕ್ಕಿಲ್ಲ. ಆದರೆ ಕರ್ನಾಟಕದ ಜನರು ಆರಿಸಿ ಹೋದವರೆಲ್ಲಾ ಇದೆ ಕೆಲಸ ಮಾಡುತ್ತಾರೆ. ಅದನ್ನು ಯಾರು ಮಾಡಿದರೂ ಟಿ.ವಿ.ಯಲ್ಲಿ ನೋಡಿರುತ್ತಾರೆ. ಪ್ರೊಸೀಡಿಂಗ್ಸ್‌ನಲ್ಲಿ ಇರುತ್ತದೆ. ಯಾರ್ಯಾರು ಏನೇನು ಮಾತನಾಡಿದರು ಎಂಬುದು ಇದ್ದೇ ಇರುತ್ತದೆ. ಆದರೆ ಅಂತಿಮವಾಗಿ ಬರತಕ್ಕಂಥದ್ದು ಎಂದರೆ ಸದಾ ಯಾರು ಕಣ್ಣಿಗೆ ಕಾಣುತ್ತಾರೋ ಅವರ ಮೇಲೆಯೇ ಜಾಸ್ತಿ ಮಾತು ಬರುವುದು. ಅದು ಇರಲಿ, ಅದರ ಬಗ್ಗೆ ನಾನೇನೂ ಆಕ್ಷೇಪಣೆ ಮಾಡುವುದಿಲ್ಲ. ಅವರು ಮಾತನಾಡುವ ಸ್ವಾತಂತ್ರ್ಯ ಪಡೆದಿದ್ದಾರೆ. ಅದನ್ನು ಉಪಯೋಗ ಮಾಡಿಕೊಳ್ಳಲಿ, ಮಾತನಾಡಲಿ, ಅದರೆ ಒಂದೇ ಒಂದು ಏನೆಂದರೆ ಬಹಳ ಕಷ್ಟಪಟ್ಟು ಅನೇಕ ಸದಸ್ಯರು ತಮ್ಮ ಪ್ರತಿಭೆಯನ್ನು ಬೆಳೆಸಿಕೊಳ್ಳಬೇಕೆಂದು ಬಂದಾಗ, ಅದಕ್ಕೆ ಅನ್ಯಾಯ ಮಾಡುವುದು ಬೇಡ. ಅಕಸ್ಮಾತ್ ಏನಾದರೂ ತೊಂದರೆ ಆದರೆ ಪರವಾಗಿಲ್ಲ. ಆದರೆ ಅನಾವಶ್ಯಕವಾಗಿ ಅವರುಗಳು ಮಾತನಾಡಲು ಆಗದೇ ಇರುವ ಹಾಗೆ ಮಾಡಬಾರದೆಂದು ನಾನು ವಿನಯಪೂರ್ವಕವಾಗಿ ಕಳಕಳಿಯಿಂದ ಕೈ ಜೋಡಿಸಿ ತಮ್ಮಲ್ಲಿ ಕೇಳಿಕೊಳ್ಳುತ್ತೇನೆ. ಈಗಲೂ ಪರ ವಿರೋಧದ ವಾದದಲ್ಲಿ ಒಂದು ತಾಸು ಕಳೆಯುವುದಕ್ಕಿಂತ, ತಾವು ದಯವಿಟ್ಟು ತಕ್ಷಣ ರೂಲ್ 363 ರ ಪ್ರಕಾರ ತಮಗೆ ಇರುವ ಅಧಿಕಾರವನ್ನು ಬಳಸಿಕೊಂಡು ನಮಗೆ ಚರ್ಚೆಗೆ ಅವಕಾಶವನ್ನು ಕೊಟ್ಟು ಅನುಕೂಲ ಮಾಡಿಕೊಡಬೇಕು. ಈಗಾಗಲೇ ತಮಗೆ ನಿನ್ನೆಯ ದಿವಸ ಮೇಲ್ಮನೆ ವಿರೋಧ ಪಕ್ಷದ ನಾಯಕರಾದ ಮಾನ್ಯ ಹೆಚ್.ಕೆ. ಪಾಟೀಲರು ದಿನಾಂಕ 20.9.06ರಂದು ರಾಜ್ಯಪಾಲರಿಗೆ ಬರೆದ ಪತ್ರ ಹಾಗೂ ಅದಕ್ಕೆ ಉತ್ತರವಾಗಿ ರಾಜ್ಯಪಾಲರು ವಿಧಾನ ಪರಿಷತ್ತಿನ ವಿರೋಧ ಪಕ್ಷದ ನಾಯಕರಿಗೆ ದಿನಾಂಕ 22.9.06ರಂದು ಬರೆದ ಪತ್ರದ ನಕಲನ್ನು ತಮಗೆ ಕಳುಹಿಸಿದ ಪತ್ರದಲಿ ನಾವು ಲಗತ್ತಿಸಿದ್ದೇವೆ. ದಯವಿಟ್ಟು ವಿಷಯ ಪರಾಂಬರಿಸಿ ಚರ್ಚೆಗೆ ಅವಕಾಶ

ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಇದು ಅತ್ಯಂತ ಪ್ರಮುಖವಾದುದು. ನಾವು ಕೊಟ್ಟ ಪತ್ರದಲ್ಲಿ ಯಾವ ರೂಲ್ ಕೆಳಗೆ ಚರ್ಚೆಗೆ ತೆಗೆದುಕೊಳ್ಳಬೇಕು ಎಂದು ಪತ್ರ ಬರೆದಿಲ್ಲ. ಚರ್ಚೆಗೆ ಪರ್ಮಿಷನ್ ಕೇಳಿಲ್ಲ ಅನ್ನತಕ್ಕದ್ದು ಸರಿಯಲ್ಲ. ಎಲ್ಲರೂ ಕೂಗಾಡುವುದು, ಎಲ್ಲರೂ ಮೈಕ್ ಹಿಡಿದುಕೊಳ್ಳುವುದು, ಸ್ವಲ್ಪವಾದರೂ ವಿಚಾರ ಮಾಡಬೇಕಲ್ಲಾ? ನೋಡಬೇಕು ಪತ್ರವನ್ನು. ಈ ಪತ್ರದಲ್ಲಿ ಇಂತಹ ರೂಲ್‌ನಲ್ಲಿ ಬರೆದಿಲ್ಲವೆಂದರೆ ಒಪ್ಪಿಕೊಳ್ಳುತ್ತೇವೆ. ಪತ್ರವನ್ನೇ ಬರೆದಿಲ್ಲವೆಂದರೆ what message will go outside? ಇಲ್ಲಿ ಕೆಲವು ಜನರು ಇದ್ದಾರೆ. 'ಆ' ಎಂದರೆ ಆಕಾಶವೆಂದು ಬರೆದು ಬಿಡುತ್ತಾರೆ. ಅದಕ್ಕಾಗಿ ಹೊರಗಡೆ ಈ ಮೆಸೇಜ್ ಹೋಗಬಾರದು. ಬರೆದಂತಹ ಪತ್ರ ತಮ್ಮ ಕಡೆಯಿದೆ ಮತ್ತು ನಾವು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ. ಆದಕಾರಣ ತಾವು ರೂಲ್ 363ರ ಕೆಳಗಡೆ ತಮಗೆ ಇರುವ ಅಧಿಕಾರವನ್ನು ಬಳಸಿಕೊಂಡು ಚರ್ಚೆಗೆ ಅನುಮತಿ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಆರಗ ಜ್ಞಾನೇಂದ್ರ : ಮಾನ್ಯ ಅಧ್ಯಕ್ಷರೆ, ಅಜೆಂಡಾದಲ್ಲಿ ಯಾವ ಕಾರ್ಯಕಲಾಪಗಳನ್ನು ನಡೆಸಬೇಕು ಎಂದು ಇದೆಯೋ ಆ ಪಟ್ಟಿ ಚರ್ಚೆಗೆ ತೆಗೆದುಕೊಳ್ಳಬೇಕು. ಮಾನ್ಯ ಖರ್ಗೆಯವರಿಗೂ ನಿಯಮಗಳ ಬಗ್ಗೆ ಪೂರ್ಣವಾದ ಪರಿಚಯವಿದೆ. ಕರ್ನಾಟಕ ರಾಜ್ಯದ ಇತಿಹಾಸದಲ್ಲಿ ಶಾಸನಸಭೆಯಲ್ಲಿ ಬಹಳ ವರ್ಷ ಕೆಲಸ ಮಾಡಿರತಕ್ಕವರು. ಹಾಗಾಗಿ ಅಜೆಂಡಾ ಪ್ರಕಾರ ಹೋಗಬೇಕು. ನಿಯಮಾವಳಿ ಪ್ರಕಾರ ನೋಟಿಸ್ ಕೊಟ್ಟರೆ ತಾವು ಅವಕಾಶ ಕೊಟ್ಟರೆ ಇಲ್ಲಿ ಎಲ್ಲಾ ಚರ್ಚೆ ಆಗಲಿ. ಇಡೀ ಒಂದು ದಿನ ಅವರು ಬರೆದಂತಹ ಪತ್ರ ರಾಜ್ಯಪಾಲರಿಂದ ಬಂದಂತಹ ಉತ್ತರ, ತೆಲಗಿ ಟೇಪ್ ಹಗರಣ, ಇದೆಲ್ಲಾ ಕೂಡ ಸಂಪೂರ್ಣವಾಗಿ ಚರ್ಚೆಗೆ ಬರಲಿ. ಈ ಸದನದಲ್ಲಿ ಏನಾಗುತ್ತದೆಂದು ಚರ್ಚೆ ಮಾಡೋಣ. ಅದಕ್ಕೆ ಎಲ್ಲರಿಗೂ ಅವಕಾಶ ಕೊಡಿ. ವೀರಪ್ಪನ್ನು ಕೇಸ್ ಎಲ್ಲವೂ ಕೂಡ ಬರಬೇಕು. ಜನರಿಗೆ ಒಳ್ಳೆಯ ಮೆಸೇಜ್ ಹೋಗಬೇಕಾಗುತ್ತದೆ. ಇವತ್ತು ಬೆಳಗಾಂ ಅಧಿವೇಶನ ಏನಿದೆ ಇಲ್ಲಿ ಸರಿಯಾದಂತಹ ಚರ್ಚೆಯಾಗಬೇಕು, ಇಲ್ಲಿ ಅನೇಕ ಬಿಲ್‌ಗಳು ರಾಜ್ಯದ ಜನತೆಯ ಹಿತದೃಷ್ಟಿಯಿಂದ ಪಾಸ್ ಆಗಬೇಕಾಗಿದೆ. ಇದು ಪೂರ್ಣ ಪ್ರಯೋಜನವಾಗಬೇಕು. ಇದು ನಿಷ್ಪ್ರಯೋಜನವಾಗಬಾರದೆಂದು ತಮ್ಮಲ್ಲಿ ನಾನು ವಿನಂತಿ ಮಾಡುತ್ತೇನೆ. ಮತ್ತು ಬೆಳಗಾಂಗೆ ನಮ್ಮ ಸರ್ಕಾರದ ಕಡೆಯಿಂದ ಏನಾದರೂ ಪ್ರಕಟವಾದರೆ ಅದರ ಬಗ್ಗೆ ಕೂಡ ತುಂಬಾ ಸಂತೋಷಪಡುತ್ತಾರೆ. ಹೊರಗಡೆ ಜನ ಕಾಯುತ್ತಿದ್ದಾರೆ. ಈ ಉತ್ತರ ಕರ್ನಾಟಕದ ಜನ ತುಂಬಾ ಕಾತುರದಿಂದ ನೋಡುತ್ತಿದ್ದಾರೆ. ಈ ಅಧಿವೇಶನದಲ್ಲಿ ಸರ್ಕಾರ ಏನು ನಿರ್ಣಯ ಹೇಳುತ್ತದೆ ಎಂದು ನೋಡುತ್ತಿದ್ದಾರೆ.

ಆ ರೀತಿಯಲ್ಲಿ ಚರ್ಚೆಯಾಗಲಿ. ಬೆಂಗಳೂರಿನಲ್ಲಿ ಅವರಿಗೆ ಸಮಯಕ್ಕೆ ಸರಿಯಾಗಿ ನೋಟೀಸ್ ಕಳುಹಿಸುವುದಕ್ಕೆ ಆಗಲಿಲ್ಲ. ನಿಯಮಾವಳಿಗಳ ಪ್ರಕಾರ ಕಳುಹಿಸುವುದಕ್ಕೆ ಆಗಲಿಲ್ಲ ಎನ್ನುವ ಕಾರಣಕ್ಕಾಗಿ ಕೈಬಿಡುವುದು ಬೇಡ. ಮುಂದಿನ ಅಧಿವೇಶನದಲ್ಲಿ

ಅದನ್ನು ತೆಗೆದುಕೊಳ್ಳಲಿ. ವಿಸ್ತೃತವಾದ ಚರ್ಚೆಯನ್ನು ನಾವು ಮಾಡೋಣ. ಅದರಲ್ಲಿ ತೊಂದರೆ ಏನಿಲ್ಲ. ಇವತ್ತು ಅಜೆಂಡಾ ಪ್ರಕಾರ ತೆಗೆದುಕೊಳ್ಳಬೇಕು ಎಂದು ನನ್ನ ವಿನಂತಿ ಇದೆ.

ಶ್ರೀ ಬಿ.ಆರ್. ಪಾಟೀಲ್ : ಮಾನ್ಯ ಅಧ್ಯಕ್ಷರೆ, ಮಾನ್ಯ ರಾಜ್ಯಪಾಲರು ಈ ಸಂವಿಧಾನದ ಮುಖ್ಯಸ್ಥರು, ಮತ್ತು ಈ ಆಡಳಿತದ ಬಗ್ಗೆ.....

ಶ್ರೀ ಎಂ.ಪಿ. ಪ್ರಕಾಶ್ : ಅವರು ಸಂವಿಧಾನದ ಮುಖ್ಯಸ್ಥರಲ್ಲ.

(ಅಡಚಣೆ)

ಶ್ರೀ ಬಿ.ಆರ್. ಪಾಟೀಲ್(ಆಳಂದ) : ಈ ತರಹ ನನಗೆ ಬಾಯಿ ಮುಚ್ಚಿಸುವುದಕ್ಕೆ ಮಾತನಾಡುವುದು ಬೇಡ. ಮಾನ್ಯ ಅಧ್ಯಕ್ಷರೆ, ತಾವು ನನಗೆ ಅವಕಾಶ ಕೊಟ್ಟಿದ್ದೀರಿ. ನಾನು ಮಾತನಾಡುತ್ತಿದ್ದೇನೆ. ನನ್ನ ವಾದವನ್ನು ಒಪ್ಪಬಹುದು, ಒಪ್ಪದೆ ಇರಬಹುದು. ಒಬ್ಬ ಘನತೆವೆತ್ತ ರಾಜ್ಯಪಾಲರು ಈ ರಾಜ್ಯದ ಆಡಳಿತದ ವ್ಯವಸ್ಥೆಯ ಬಗ್ಗೆ ಕಾಳಜಿಯನ್ನು, ತಮ್ಮದೇ ಆದಂತಹ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ಇದು ಜವಾಬ್ದಾರಿ ಸರ್ಕಾರ. ಇಲ್ಲಿ ಸದನ ಸೇರಿ, ಈ ರಾಜ್ಯದ 224 ಜನ ಶಾಸಕರು, ಈ ರಾಜ್ಯಕ್ಕೆ ಸಂಬಂಧಪಟ್ಟ ಪ್ರತಿನಿಧಿಗಳು ಸೇರಿದ್ದೇವೆ. ಇದರ ಬಗ್ಗೆ ಈ ಸದನದಲ್ಲಿ ಚರ್ಚೆಯಾಗಿ ಅದರ ಬಗ್ಗೆ ತೀರ್ಮಾನ ಬಂದರೆ ರಾಜ್ಯದ ಆಡಳಿತದಲ್ಲಿ ಸುಧಾರಣೆ ಮಾಡಬಹುದು ಮತ್ತು ಜನರಿಗೆ ಅವರು ಸರಿಯಾಗಿ ಹೇಳಿದ್ದಾರೊ ತಪ್ಪು ಹೇಳಿದ್ದಾರೋ ಅಥವಾ ಅವರ ಕಾಳಜಿಯಲ್ಲಿ ನ್ಯೂನ್ಯತೆ ಇದೆಯೋ ಅಥವಾ ಹೆಚ್.ಕೆ. ಪಾಟೀಲರು ಕರೆದು ತಿಳುವಳಿಕೆ ಕೊಟ್ಟಿದ್ದಾರೋ ಎಂದು ಇದರ ಬಗ್ಗೆ ಚರ್ಚೆಯಾಗಲಿ. This is a open House. ಹಾಗಾಗಿ ಮಾನ್ಯ ಖರ್ಗೆಯವರು ತಮ್ಮ ಮುಖಾಂತರ ವಿನಂತಿ ಮಾಡಿಕೊಂಡಿದ್ದಾರೆ. ಇದರ ಬಗ್ಗೆ ಚರ್ಚೆಯಾಗಬೇಕು ಮತ್ತು ಬೆಂಗಳೂರಿನಲ್ಲಿ ಎಲ್ಲಾ ವಿಚಾರಗಳು ಅವರಿಗೆ ಗೊತ್ತಾಗಬೇಕು. ಅಲ್ಲಿ ನಡೆದಂತಹ ಎಲ್ಲಾ ಅವ್ಯವಹಾರಗಳು, ವ್ಯವಹಾರಗಳು ನಮ್ಮ ಉತ್ತರ ಕರ್ನಾಟಕದಲ್ಲಿ ಗೊತ್ತಾಗಬೇಕೆಂದು ನಾನು ಕೂಡ ಹೇಳುತ್ತೇನೆ.

SRI. B.R. PATIL : I am a Law student. Don't forget it.

ಶ್ರೀ ಸಿದ್ದು ಸವದಿ : ಮಾನ್ಯ ಅಧ್ಯಕ್ಷರೆ, ನಾವು ಬೆಳಗಾಂಗೆ ಅಧಿವೇಶನ ಎಂದು ಬಂದಿದ್ದು, ಸರ್ಕಾರ ಅಧಿವೇಶನವನ್ನು ಬೆಳಗಾಂನಲ್ಲಿ ಮಾಡಬೇಕು ಎಂದು ಮಾಡಿದ್ದು, ಬರ ಪರಿಹಾರದ ಬಗ್ಗೆ ಇಲ್ಲಿ ಚರ್ಚೆಯಾಗಲಿ, ಸದನದ ಸಮಯವನ್ನು ಹಾಳು ಮಾಡುವುದು ಬೇಡ.

ಅಧ್ಯಕ್ಷರು : ಆಯಿತು ಕುಳಿತುಕೊಳ್ಳಿ.

(ಅಡಚಣೆ)

ಶ್ರೀ ಎಂ.ಪಿ. ವೆಂಕಟೇಶ್ : ಮಾನ್ಯ ಅಧ್ಯಕ್ಷರೆ, ಕಳೆದ ಅಧಿವೇಶನ ಬೆಂಗಳೂರಿನಲಿ ನಡೆದಾಗ ವಿರೋಧಪಕ್ಷದವರು ರಾಜ್ಯಪಾಲರ ಬಗ್ಗೆ ಯಾವರೀತಿ ನಡೆದುಕೊಂಡರು? ಅವರ ಸಿಬ್ಬಂದಿಗಳನ್ನು ಯಾವರೀತಿ ಓಡಿಸಿದರು. ಅವರು

ಒಂದು ಪತ್ರ ಬರೆದಿದ್ದಾರೆ ಎಂದರೆ ಅದು ಚರ್ಚೆಯಾಗಬೇಕಾ? ನನ್ನ ಹತ್ತಿರ ಕಾಗದ ಇದೆ. ತಾವು ನನಗೆ ಅವಕಾಶ ಮಾಡಿಕೊಡಬೇಕು.

(ಈ ಹಂತದಲ್ಲಿ ಮಾನ್ಯ ಎಂ.ಪಿ. ವೆಂಕಟೇಶ್ ರವರು ತಮ್ಮ ಕೈಲ್ಲಿದಂತಹ ಫೈಲ್ ಅನ್ನು ಎತ್ತಿ ತೋರಿಸಿದರು)

ಶ್ರೀ ಲಕ್ಷ್ಮಣ್ ಸಂಗಪ್ಪ ಸವದಿ : ಮಾನ್ಯ ಅಧ್ಯಕ್ಷರೆ, ಬೆಳಗಾವಿಯಲಿ ನಡೆದಿರತಕ್ಕಂಥ ಅಧಿವೇಶನದಲ್ಲಿ ಉತ್ತರ ಕರ್ನಾಟಕದ ಅಭಿವೃದ್ಧಿ ಏನಾದರೂ ಚಿಂತನೆಯಾಗುತ್ತದೆ ಎನ್ನುವ ಕಳಕಳಿಯನ್ನು ನಾವೆಲ್ಲರೂ ಕೂಡಿರತಕ್ಕಂಥವರು, ಪದೇಪದೇ ಮಾನ್ಯ ರಾಜ್ಯಪಾಲರು ಬರೆದಿರುವಂಥಾದ್ದರ ವಿಷಯವನ್ನು ಇಟ್ಟುಕೊಂಡು ಚರ್ಚೆ ಮಾಡುವುದು ಬೇಡ. ಇವತ್ತು ಉತ್ತರ ಕನಾಟಕದ ಅಭಿವೃದ್ಧಿ ಬಗ್ಗೆ ಚಿಂತನೆ ಮಾಡತಕ್ಕಂಥಾದ್ದು ಬಹಳ ಪ್ರಾಮುಖ್ಯವಾಗಿರತಕ್ಕಂಥ ವಿಷಯ. ದಯಮಾಡಿ ಇದನ್ನು ತೆಗೆದುಕೊಳ್ಳಿ. ಇಲ್ಲದೆ ಇದ್ದರೆ ಉತ್ತರ ಕರ್ನಾಟಕದ ಶಾಸಕರೆಲ್ಲರೂ ಬಾವಿಗೆ ಬರುತ್ತಿದ್ದೇವೆ.

(ಈ ಹಂತದಲ್ಲಿ ಮಾನ್ಯ ಸಿದ್ದು ಸವದಿ ಮತ್ತು ಮಾನ್ಯ ಲಕ್ಷ್ಮಣ ಸಂಗಪ್ಪ ಸವದಿ, ಇನ್ನು ಉತ್ತರ ಕರ್ನಾಟಕದ ಅನೇಕ ಸದಸ್ಯರು ಬಾವಿಯ ಹತ್ತಿರ ಬಂದರು)

(ಅಡಚಣೆ)

ಶ್ರೀ ಎಂ.ಪಿ. ಪ್ರಕಾಶ್ : ದಯಮಾಡಿ ಹಾಗೆ ಮಾಡಬೇಡಿ, ನಾವೆಲ್ಲಾ ಆಡಳಿತ ಪಕ್ಷದವರಾಗಿ ಆ ರೀತಿ ಮಾಡಬಾರದು. ಇದು ತೊಂದರೆಯಾಗುತ್ತದೆ.

ಶ್ರೀ ಎಂ.ಪಿ. ವೆಂಕಟೇಶ್ : ಮಾನ್ಯ ಅಧ್ಯಕ್ಷರೆ, ಇವತ್ತು ಬೆಳಗಾವಿ ಅಧಿವೇಶನ ಇದೆ, ಕಾಂಗ್ರೆಸ್ ಪಕ್ಷದವರು ಅದಕ್ಕೆ ನಾಮಕಾವಸ್ಥೆ ಸಹಕಾರ ಇದೆಯೆಂದು ಹೇಳುತ್ತಾರೆ. ಆದರೆ ಯಾವುದೇ ಚಿಂತನೆ ಅಭಿವೃದ್ಧಿ ಬಗ್ಗೆ ಇಲ್ಲ. ರೈತರ ಬಗ್ಗೆ ಚಿಂತನೆ ಇಲ್ಲ.

ಡಾ॥ ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ (ಸೇಡಂ) : ಉತ್ತರ ಕರ್ನಾಟಕ ಭಾಗಕ್ಕೆ ಪೂರಕ ಅಂದಾಜಿನಲಿ ಏನು ಕೊಟ್ಟಿದ್ದೀರಿ. ಅದನ್ನು ಹೇಳಲಿ. ಸರ್ಕಾರ ಕೇವಲ ಎಲ್ಲಾ ಪ್ರಚಾರಕ್ಕಾಗಿ ಮಾಡುತ್ತಿದೆ. ನೀವು ಉತ್ತರ ಕರ್ನಾಟಕ್ಕೆ ಏನೂ ಕೊಟ್ಟಿಲ್ಲ. ಪೂರಕ ಅಂದಾಜಿನಲ್ಲಿ ಒಂದು ಪೈಸೆ ಕೂಡ ಕೊಟ್ಟಿಲ್ಲ. ಅಲ್ಲಿಗೆ ಏನು ಹಣ ಕೊಟ್ಟಿದ್ದಾರೆ ಎಂದು ಹೇಳಲಿ. ಕೊಟ್ಟಿಲ್ಲ. ಇಲ್ಲಿ ಬರೀ ಅಧಿವೇಶನ ಮಾಡಿದರೆ ಸಾಕಾ? ಇದೆಲ್ಲಾ ಪ್ರಚಾರಕ್ಕೋಸ್ಕರ ಮಾಡುತ್ತಿದ್ದೀರಿ. ಹಣ ಕೊಟ್ಟಿದ್ದಾರಾ ಎಂದು ಹೇಳಲಿ. ಉತ್ತರ ಕರ್ನಾಟಕಕ್ಕೆ ಒಂದು ಪೈಸೆ ಕೊಟ್ಟಿಲ್ಲ. ಬೆಳಗಾಂ ಮೆಡಿಕಲ್ ಕಾಲೇಜಿಗೆ ನೀವು ಒಂದು ಪೈಸೆ ಕೊಡಲಿಲ್ಲ. ಬೆಳಗಾಂ ಅಭಿವೃದ್ಧಿಗೆ ಒಂದು ಪೈಸೆ ಕೊಡಲಿಲ್ಲ. ಉತ್ತರ ಕರ್ನಾಟಕಕ್ಕೆ ನೀವು ಹಣವನ್ನು ಕೊಡಲಿಲ್ಲ.

ಶ್ರೀ ಕೆ.ಎಸ್. ಈಶ್ವರಪ್ಪ : ಮಾನ್ಯ ಅಧ್ಯಕ್ಷರೆ, ಉತ್ತರ ಕರ್ನಾಟಕದ ಬಗ್ಗೆ ಮಾಡನಾಡುವುದಕ್ಕೆ ನೀವೇನು ಅಪೇಕ್ಷೆ ಪಟ್ಟಿದ್ದೀರಿ, ಅದಕ್ಕೇ ಅಧಿವೇಶನ ಕರೆದಿರುವುದು. ಈಗ ಮಾನ್ಯ ಪ್ರಕಾಶ್‌ರವರು ಮಾತನಾಡುತ್ತಾರೆ.

ಡಾ॥ ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ : ಪೂರಕ ಅಂದಾಜಿನಲ್ಲಿ ಉತ್ತರ ಕರ್ನಾಟಕಕ್ಕೆ ಒಂದು ಪೈಸೆ ಕೊಟ್ಟಿಲ್ಲ. ಬರೀ ಬಾಯಿ ಮಾತಿನಲ್ಲಿ ಹೇಳುತ್ತಿದ್ದಾರೆ. ಏನು ಹಣ ಉತ್ತರ ಕರ್ನಾಟಕ್ಕೆ ಕೊಟ್ಟಿದ್ದೀರಿ ಹೇಳಿ, ನೋಡೋಣ. ಪೂರಕ ಅಂದಾಜಿನಲ್ಲಿ ಒಂದು ಪೈಸೆ ಕೊಟ್ಟಿಲ್ಲ. ಬರೀ ಶಿವಮೊಗ್ಗ, ಹಾಸನ, ಮಂಡ್ಯಕ್ಕೆ ಕೊಟ್ಟಿದ್ದೀರಿ. ಮುಖ್ಯಮಂತ್ರಿಯವರು ಹಾಸನಕ್ಕೆ ಮಾತ್ರ ಮುಖ್ಯಮಂತ್ರಿ ಇದ್ದಾರಾ ಇವರು?

ಅಧ್ಯಕ್ಷರು : ದಯಮಾಡಿ ನಿಮ್ಮ ಆಸನಗಳಿಗೆ ಹೋಗಿ.

ಶ್ರೀ ಎಂ.ಪಿ. ಪ್ರಕಾಶ್ : ಮಾನ್ಯ ಅಧ್ಯಕ್ಷರೆ, ಮಾನ್ಯ ಶಾಸಕರುಗಳು ಬಹಳ ತೀವ್ರವಾದಂತಹ ಅಭಿಪ್ರಾಯವನ್ನು ವ್ಯಕ್ತ ಮಾಡುತ್ತಿದ್ದಾರೆ.

ಅಧ್ಯಕ್ಷರು : ಆಯಿತು ಈಗ ಎಲ್ಲರೂ ತಮ್ಮ ಆಸನಗಳಿಗೆ ಹೋಗಿ.

ಒಬ್ಬರು ಮಾನ್ಯ ಸದಸ್ಯರು : ಮಾನ್ಯ ಅಧ್ಯಕ್ಷರೆ, ಇವತ್ತಿನ ಅಧಿವೇಶನದಲ್ಲಿ ಕಾಂಗ್ರೆಸ್‌ನವರದ್ದು ಉತ್ತರ ಕರ್ನಾಟಕದ ಅಭಿವೃದ್ಧಿ ಬಗ್ಗೆ ಸಂಪೂರ್ಣವಾಗಿ ವಿರೋಧ ಇದೆ. ಇವರು ಕೇವಲ ಮೊಸಳೆ ಕಣ್ಣೀರು ಸುರಿಸಿದ ಹಾಗೆ ಸುರಿಸುತ್ತಾರೆ. ಇವರು ಬೆಳಗಾಂ ಅಧಿವೇಶನಕ್ಕೆ ಸಹಕಾರ ಕೊಡುವುದಿಲ್ಲ. ಐತಿಹಾಸಿಕ ಅಧಿವೇಶನ ಎನ್ನುವುದು ನೆಪ ಮಾತ್ರ, ಉತ್ತರ ಕರ್ನಾಟಕದ ಬಗ್ಗೆ ಅವರಿಗೆ ಚಿಂತನೆ ಇಲ್ಲ. ಅವರದು ಸಂಪೂರ್ಣ ವಿರೋಧ ಇದೆ.

ಶ್ರೀ ಎನ್. ಧರ್ಮಸಿಂಗ್ : ಮಾನ್ಯ ಅಧ್ಯಕ್ಷರೆ, ನಿನ್ನೆ ಕೂಡ ಈ ತರಹ ಗಲಾಟೆಯಾಯಿತು. ಇವತ್ತು ನಾವು ಸೌಜನ್ಯದಿಂದ ಮಾನ್ಯ ರಾಜ್ಯಪಾಲರು ಬಹಿರಂಗವಾಗಿ ಏನು ಪತ್ರ ಬರೆದಿದ್ದಾರೆ, ಅದರ ಬಗ್ಗೆ ಚರ್ಚೆ ಮಾಡಬೇಕೆಂದು ಕೇಳಿದ್ದೇವೆ. ಇವತ್ತು ನಾವು ಈಗಲೂ ಕೂಡ,

(ಅಡಚಣೆ)

ಶ್ರೀ ಎನ್. ಧರ್ಮಸಿಂಗ್ : ಮಾನ್ಯ ಸಭಾನಾಯಕರು ಇದ್ದಾರೆ, ಸಂಸದೀಯ ವ್ಯವಹಾರಗಳ ಸಚಿವರು ಇದ್ದಾರೆ, ಈ ಸಂದರ್ಭದಲ್ಲಿ ಈ ತರಹದ ಗಲಾಟೆ ಮಾಡುತ್ತಾ ಹೋದರೆ, ನಾವು ಸದನದಲ್ಲಿ ಇರಬೇಕಾ ಬೇಡವೇ?

ಶ್ರೀ ಎಂ.ಪಿ. ವೆಂಕಟೇಶ್ : ಅದನ್ನು ನೀವೇ ತೀರ್ಮಾನ ಮಾಡಿಕೊಳ್ಳಿ.....

ಶ್ರೀ ಎನ್. ಧರ್ಮಸಿಂಗ್ : ಮಾನ್ಯ ಅಧ್ಯಕ್ಷರೆ, ತಾವು ನಿರ್ಣಯವನ್ನು ಮಾಡುತ್ತಿಲ್ಲ. ತಾವು ಹೇಳಿದ ರೀತಿಯಲ್ಲಿ ಈ ಸದನ ನಡೆಯಬೇಕಾಗಿದೆ. ಸದನದಲ್ಲಿ ಪ್ರಸ್ತಾಪ ಮಾಡುವಂತಹ ವಿಷಯಗಳ ಬಗ್ಗೆ ಸಮರ್ಪಕವಾದಂತಹ ಉತ್ತರವನ್ನು ಸರ್ಕಾರ ಕೊಡಬೇಕು. ನಾವು ಮಾತನಾಡುತ್ತೇವೆ, ಅವರು ಬರಕ್ಕೆ ಎಷ್ಟು ದುಡ್ಡು

ಕೊಟ್ಟಿದ್ದಾರೆ. ನಾವು ಎಷ್ಟು ದುಡ್ಡು ಬಿಡುಗಡೆ ಮಾಡಿದ್ದೇವೆಂದು ಹೇಳುತ್ತೆವೆ. ಪ್ರವಾಹ ಪೀಡಿತ ಪ್ರದೇಶಕ್ಕೆ ಎಷ್ಟು ಕೊಟ್ಟಿದ್ದೀರಿ? ನಾವು 171 ಕೋಟಿ ರೂಪಾಯಿ ಕೊಟ್ಟಿದ್ದೇವೆ. ನೀವು ಎಷ್ಟು ಕೊಟ್ಟಿದ್ದೀರಿ ಎಂದು ನಮಗೆ ಹೇಳಿ. ಈ ತರಹದ ಅಡ್ಡಿಯನ್ನು ಒಪ್ಪುವುದಿಲ್ಲ. ಗೂಂಡಾಗಿರಿ ಮಾಡಿದರೆ ಆಗುವುದಿಲ್ಲ.

(ಅಡಚಣೆ)

ಶ್ರೀ ಎನ್. ಧರ್ಮಸಿಂಗ್ : ಇವರೆಲ್ಲಾ ಉದ್ದೇಶಪೂರ್ವಕವಾಗಿ ಗಲಾಟೆ ಮಾಡುತ್ತಿದ್ದಾರೆ. ನಾವು ಗಲಾಟೆಗೆ ಮಣಿಯುವವರಲ್ಲ, ನಾವು ಸೌಜನ್ಯತೆಯಿಂದ ಕೆಲವು ವಿಷಯಗಳನ್ನು ಪ್ರಸ್ತಾಪ ಮಾಡಿದ್ದೇವೆ. ಗಡಿ ಭಾಗದಲ್ಲಿ ಇವತ್ತು ಈ ರೀತಿಯಾಗಿ ಸಭೆ ನಡೆಯತಕ್ಕಂಥದ್ದು ಲಕ್ಷಣ ಅಲ್ಲ. ಗಡಿ ಭಾಗದಲ್ಲಿ ನಡೆಯತಕ್ಕಂಥ ಸಭೆ ಸರಿಯಾದ ರೀತಿಯಲ್ಲಿ ಆಗಬೇಕು. ನಾವು ಎತ್ತಿದ್ದಂತಹ ವಿಷಯಕ್ಕೆ ಉತ್ತರ ಕೊಡಬೇಕು, ಉತ್ತರ ಕರ್ನಾಟಕ ಭಾಗಕ್ಕೆ ನಾವು ಏನು ಮಾಡಿದ್ದೇವೆಂದು ಪ್ರಸ್ತಾಪ ಮಾಡುತ್ತೇವೆ. ಇವತ್ತು ನಾವು ಪ್ರವಾಹ ಪೀಡಿತ ಪ್ರದೇಶಕ್ಕೆ ಎಷ್ಟು ಹಣ ಬಿಡುಗಡೆ ಮಾಡಿದ್ದೇವೆ ಎಂದು ಹೇಳುತ್ತೇವೆ. ನೀವು ಪ್ರವಾಹಪೀಡಿತ ಪ್ರದೇಶಗಳಿಗೆ ಎಷ್ಟು ಹಣ ಬಿಡುಗಡೆಯಾಗಿದೆಯೆಂದು ಹೇಳಬೇಕು. ಕೇವಲ ಪತ್ರಿಕೆಯಲ್ಲಿ ಹೇಳಿಕೆ ಕೊಟ್ಟರೆ ಆಗುವುದಿಲ್ಲ. ಅದರ ಬಗ್ಗೆ ನಾವೂ ಚರ್ಚೆಗೆ ಸಿದ್ಧರಾಗಿದ್ದೇವೆ. ಈ ತರಹ ಗಲಾಟೆಯಿಂದ ನಾವು ಸುಮ್ಮನೆ ಕೊಡಲಿಕ್ಕೆ ಆಗುವುದಿಲ್ಲ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ (ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೆ, ನಾನು ತಮ್ಮ ಬಳಿ ಒಂದು ಮನವಿಯನ್ನು ಮಾಡಬಯಸುತ್ತೇನೆ. ಇವತ್ತು ಏನು ಸನ್ಮಾನ್ಯ ವಿರೋಧಪಕ್ಷದ ನಾಯಕರಾದ ಹೆಚ್.ಕೆ. ಪಾಟೀಲ್‌ರವರು ಬರೆದಿರುವಂತಹ ಪತ್ರಕ್ಕೆ ಮಾನ್ಯ ರಾಜ್ಯಪಾಲರ ಪ್ರತಿಕ್ರಿಯೆ ಏನು ಇದೆ. ಅದನ್ನು ಇಲ್ಲಿ ಚರ್ಚೆ ಮಾಡಬೇಕೆಂದು ಏನು ನೋಟೀಸ್ ಕಳುಹಿಸಿದ್ದಾರೆ. ನನಗೆ ಸಮಯವನ್ನು ವ್ಯರ್ಥ ಮಾಡುವಂಥ ಅವಶ್ಯಕತೆ ಇಲ್ಲ. ಇದರ ಬಗ್ಗೆ ಚರ್ಚೆ ಮಾಡಬೇಕೆಂದು ಈ ಸದನ ಬಯಸುವುದಾದರೆ, ಚರ್ಚೆ ಪ್ರಾರಂಭ ಮಾಡೋಣ. ಸಮಯ ವ್ಯರ್ಥ ಮಾಡುವ ಅವಶ್ಯಕತೆ ಇಲ್ಲ. ಸರ್ಕಾರ ಉತ್ತರವನ್ನು ಕೊಡುವುದಕ್ಕೆ ತಯಾರು ಇದೆ. ಮಾನ್ಯ ರಾಜ್ಯಪಾಲರು ಏನು ಪತ್ರವನ್ನು ಬರೆದಿದ್ದಾರೆ. ಅದನ್ನು ನಾನು ಈಗ ತರಿಸಿ ನೋಡಿದ್ದೇನೆ. ಅದರಲ್ಲಿ ಅವರ ಭಾವನೆಗಳು ಯಾವ ರೀತಿ ಇದೆಯೆಂಬುದರ ಬಗ್ಗೆ ಈ ಪತ್ರವನ್ನು ಓದಿದ ನಿಮ್ಮೆಲ್ಲರಿಗೂ ಅರ್ಥವಾಗಿರಬಹುದು. ಇವತ್ತಿನ ವ್ಯವಸ್ಥೆ ಎಷ್ಟರಮಟ್ಟಿಗೆ ಕುಲಗೆಟ್ಟಿದೆ. ಇವತ್ತಿನ ರಾಜಕಾರಣ ಎನ್ನುವುದನ್ನು ಅವರು ವ್ಯಕ್ತಪಡಿಸಿದ್ದಾರೆ. ಇದು ಯಾವ ಸರ್ಕಾರದ ಬಗ್ಗೆಯೂ ಅವರು ಹೇಳಿರುವಂಥಾದ್ದು ಅಲ್ಲ. ಮಾನ್ಯ ಅಧ್ಯಕ್ಷರೆ, ಇದು ಚರ್ಚೆಯಾಗಬೇಕೆಂದರೆ ಸರ್ಕಾರವೂ ತಯಾರಾಗಿದೆ.

ಇವತ್ತು ಸಮಯವನ್ನು ವ್ಯರ್ಥ ಮಾಡಿ, ಒಬ್ಬರ ಮೇಲೆ ಒಬ್ಬರು ಕೆಸರನ್ನು ಎರಚಿ ಇವತ್ತು ರಾಜಕಾರಣವನ್ನು ಮಾಡುವಂತಹ ಅವಶ್ಯಕತೆ ಇಲ್ಲ. ಅಲ್ಲಿ ಯಾರೋ ಒಬ್ಬರು ಹೇಳುತ್ತಾರೆ. ಇಲ್ಲಿ ಪ್ರಚಾರಕ್ಕೋಸ್ಕರ ಸಭೆಯನ್ನು ಕರೆದಿದ್ದಾರೆಂದು ಹೇಳಿದ್ದಾರೆ. ನಾನು ತಮ್ಮಲ್ಲಿ ಮನವಿಯನ್ನು ಮಾಡುತ್ತೇನೆ. ಈ ವಿಷಯ ಪ್ರಮುಖವಾಗಿದೆಯೆಂದು ತಮ್ಮ ಗಮನಕ್ಕೆ ಬಂದರೆ, ತಾವು ಚರ್ಚೆಗೆ ಅವಕಾಶವನ್ನು ಕೊಡಿ, ಚರ್ಚೆಯನ್ನು ಮಾಡಲಿ, ಈ ಸದನ ಒಪ್ಪಿಕೊಳ್ಳುವುದಾದರೆ ಕೊಡಿ.

ಶ್ರೀ ಹೆಚ್. ಆಂಜನೇಯ : ಮಾನ್ಯ ಅಧ್ಯಕ್ಷರೆ, ಮೊದಲು ಉತ್ತರ ಕರ್ನಾಟಕದ ಬಗ್ಗೆ ಚರ್ಚೆ ಆಗಬೇಕು.

(ಅಡಚಣೆ)

ಅಧ್ಯಕ್ಷರು : ದಯಮಾಡಿ ಎಲ್ಲರೂ ಕುಳಿತುಕೊಳ್ಳಿ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ (ಬಾಗೇಪಲ್ಲಿ) : ಮಾನ್ಯ ಅಧ್ಯಕ್ಷರೆ, ಮಾನ್ಯ ರಾಜ್ಯಪಾಲರು ಬರೆದಿರುವಂತಹ ಪತ್ರವನ್ನು ಈ ಸದನದಲ್ಲಿ ಚರ್ಚೆ ಮಾಡುವುದಕ್ಕೆ ಯಾವುದೇ ನಿಯಮಾವಳಿಯಲ್ಲಿ ಅವಕಾಶವಿಲ್ಲ. ಅದನ್ನು ಮಾಡಬಾರದು, ಅದು ನಿಯಮದ ಪ್ರಕಾರ ತಪ್ಪಾಗುತ್ತದೆ. ಮಾನ್ಯ ರಾಜ್ಯಪಾಲರು ಬರೆದಿರುವಂತಹ ಪತ್ರದ ಬಗ್ಗೆ ಸದನದಲ್ಲಿ ಚರ್ಚೆ ಮಾಡುವುದಕ್ಕೆ ಅವಕಾಶವನ್ನು ಕೊಡುವುದಕ್ಕೆ ಸಾಧ್ಯವಿಲ್ಲ. ಆ ರೀತಿ ಮಾಡಲು ಯಾವ ನಿಯಮದಲ್ಲೂ ಸಾಧ್ಯವಿಲ್ಲ, ಚರ್ಚೆ ಮಾಡಬಾದೆಂಬುದು ನನ್ನ ಅಭಿಪ್ರಾಯ.

ಶ್ರೀ ಎಂ.ಪಿ. ಪ್ರಕಾಶ್ : ಮಾನ್ಯ ಅಧ್ಯಕ್ಷರೆ, ಮಾನ್ಯ ಮಾನ್ಯ ಮುಖ್ಯಮಂತ್ರಿಯವರ ಉದ್ದೇಶವೇನೆಂದರೆ, ಈ ಸರ್ಕಾರ ಯಾವುದನ್ನೂ ಮುಚ್ಚುಮರೆ ಮಾಡುತ್ತಿದೆಯೆಂಬ ಅನ್ಯ ಭಾವಗಳು ಬರಬಾರದೆಂಬ ಕಾರಣಕ್ಕಾಗಿಯೇ, ಚರ್ಚೆಯಾಗಲಿ, ನಾನು ಸಿದ್ಧನಿದ್ದೇನೆಂಬ ಮಾತನ್ನು ಹೇಳಿದರು. ಆ ಬಗ್ಗೆ ತಮ್ಮ ವಿವೇಚನೆಗೆ ಬಿಟ್ಟಿರುವಂಥಾದ್ದು. ಆ ಪತ್ರ ಮತ್ತು ಅದಕ್ಕೆ ಉತ್ತರವನ್ನು ಕೊಟ್ಟಿರುವಂಥಾದ್ದಕ್ಕೆ ತಾವು ಕೆಟ್ಟ ಸಂಪ್ರದಾಯವನ್ನು ಹಾಕಬಾರದು. ಇಲ್ಲಿ ಬಹಳ ಹಿರಿಯರು ಈ ಸದನದಲ್ಲಿ ಬಹಳ ವರ್ಷಗಳಿಂದ ಇದ್ದೀರಿ. ನಾವೇ ನಿಯಮಾವಳಿಗಳನ್ನು ರಚನೆ ಮಾಡಿಕೊಂಡಿರುವಂಥಾದ್ದು, ಈ ರೀತಿ ನಿಯಮಾವಳಿಗಳನ್ನು ರಚನೆ ಮಾಡಿಕೊಂಡಿದ್ದಾಗ, ಯಾವುದಾದರು ಒಂದು ವಿಷಯವನ್ನು ಸಭೆಯಲ್ಲಿ ಪ್ರಸ್ತಾಪ ಮಾಡಬೇಕೆಂದರೆ, ಇಂತಹ ನಿಯಮಾವಳಿಗಳ ಪ್ರಕಾರ ಸಾರ್ವಜನಿಕ ಮಹತ್ವವುಳ್ಳಂತಹ ಇತ್ತೀಚಿನ ದಿವಸಗಳಲ್ಲಿ ನಡೆದಿರುವಂತಹ ಘಟನೆಗಳ ಬಗ್ಗೆ ನಾವು ಚರ್ಚೆ ಮಾಡುವುದಕ್ಕೆ ಬಯಸುತ್ತೇವೆಂದರೆ ಅವಕಾಶವನ್ನು ಕೊಡಬೇಕಾಗುತ್ತದೆ. ಆದರೆ ಈ ಪತ್ರ ಯಾವ ನಿಯಮಾವಳಿಯ ಅಡಿಯಲ್ಲಿ

ಬಂದಿದೆಯೆಂಬುದು ಮೊದಲನೆಯದು. ಎರಡನೆಯದಾಗಿ ಅದು ಯಾರೇ ಆಗಿರಬಹುದು, ಮಾನ್ಯ ವಿರೋಧಪಕ್ಷದ ನಾಯಕರಾಗಿರಬಹುದು, ವಿಧಾನಪರಿಷತ್ತಿನ ವಿರೋಧಪಕ್ಷದ ನಾಯಕರು ಆಗಿರಬಹುದು, ಅವರು ಮಾನ್ಯ ರಾಜ್ಯಪಾಲರಿಗೆ ಪತ್ರವನ್ನು ಬರೆದಿದ್ದಾರೆ. ಮಾನ್ಯ ರಾಜ್ಯಪಾಲರು ಅವರಿಗೆ ಉತ್ತರವನ್ನು ಕೊಟ್ಟಿದ್ದಾರೆ. ಅವರಿಬ್ಬರ ನಡುವೆ ನಡೆದಿರುವಂತಹ ಪತ್ರವ್ಯವಹಾರ, ಅದು ಈ ಸದನದ ಸ್ವತ್ತಲ್ಲ. ಇದರ ಬಗ್ಗೆ ಸದನದಲ್ಲಿ ಚರ್ಚೆ ಮಾಡುವುದಕ್ಕೆ ನಿಯಮಾವಳಿಯಲ್ಲಿ ಅವಕಾಶವಿಲ್ಲ. ಇದೇ ರೀತಿಯಾಗುವುದಾದರೆ, ಪ್ರತಿಯೊಂದು ವಿಚಾರದಲ್ಲೂ ಕೂಡ ಒಬ್ಬ ವ್ಯಕ್ತಿ ರಾಜ್ಯಪಾಲರಿಗೆ ಪತ್ರವನ್ನು ಬರೆಯುವಂತಹ ಅಂತರ್ಗತವಾದ ಹಕ್ಕು ಆತನಿಗಿದೆ. ಆದರೆ ಆ ಎಲ್ಲಾ ವಿಚಾರಗಳನ್ನೂ ಸದನದಲ್ಲಿ ಚರ್ಚೆ ಮಾಡುವುದಕ್ಕೆ ಆಗುವುದಿಲ್ಲ. ಮೂರನೆಯ ವಿಷಯವೇನೆಂದರೆ, ಈ ಪತ್ರ ವಿಚಾರಗಳ ಬಗ್ಗೆ ಏನು ಗಮನವನ್ನು ಕೊಡಬೇಕಾಗಿರುವಂತಹ ವಿಷಯಗಳು ಏನು ಇವೆ, ಅವೆಲ್ಲವೂ ಕೂಡ ನ್ಯಾಯಾಂಗದ ತನಿಖೆಯಲ್ಲಿ ಇವೆ. ಈಗ ಅವರು ಎತ್ತಿರುವಂತಹ ಸಮಸ್ಯೆಗಳಿಗೆ ಸನ್ಮಾನ್ಯ ಮುಖ್ಯಮಂತ್ರಿಯವರು ಹೇಳಿದಂತೆ, ಪ್ರಕ್ಷುಬ್ಧವಾಗಿರುವಂತಹ ವಾತಾವರಣ, ಹದಗೆಟ್ಟಿರುವಂತಹ ಸಾಮಾಜಿಕ ವ್ಯವಸ್ಥೆ, ಭ್ರಷ್ಟಾಚಾರವಾಗಿರುವಂಥಾದ್ದರ ಬಗ್ಗೆ, ಎಲ್ಲರಿಗೂ ನೋವುಂಟಾಗಿದೆಯೆನ್ನುವಂತಹ ರೀತಿಯಲ್ಲಿ, ಸಾಮಾನ್ಯ ವಿಷಯಗಳ ಬಗ್ಗೆ ಅವರು ಪ್ರತಿಕ್ರಿಯಿಸಿದ್ದಿದ್ದರೆ, ಅದನ್ನು ಕಾನೂನಿನ ಪ್ರಕಾರ ನೋಡುವಂತಹ ಅಗತ್ಯತೆ ಇದೆ. ಅದಕ್ಕೆ ನಾವು ಆಕ್ಷೇಪಣೆ ಮಾಡುವಂಥಾದ್ದು ಇಲ್ಲ. ಆದರೆ ಇಲ್ಲಿ ಹೊಸದಾಗಿ ಇರುವಂಥಾದ್ದಕ್ಕೆ ಅವಕಾಶವಿಲ್ಲ. ಆ ಕಾರಣಕ್ಕಾಗಿ ಅವರು ಏನು ಮುಕ್ತವಾಗಿ ಚರ್ಚೆಯಾಗಲಿ ಎಂದು ಹೇಳಿದರು, ಆದರೆ ಈ ವಿಚಾರಕ್ಕೆ ನಾವು ಈಗಾಗಲೇ ನ್ಯಾಯಾಂಗ ತನಿಖೆಗೆ ಏರ್ಪಾಡು ಮಾಡಿದ್ದೇವೆ. ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು residual powers ಬಗ್ಗೆ ಹೇಳಿದರು.

ಶ್ರೀ ಜೆ.ಸಿ. ಮಾಧುಸ್ವಾಮಿ : ನೀವು ಚರ್ಚೆ ಮಾಡಬೇಕೆಂಬ ವಿಷಯದ detailsಗೆ ಹೋಗಬಾರದು.

ಶ್ರೀ ಎಂ.ಪಿ. ಪ್ರಕಾಶ್ : ಮಾನ್ಯ ಮಾಧುಸ್ವಾಮಿಯವರೆ, ನಾನು ಹೋಗುತ್ತಾ ಇಲ್ಲ, ನಾನು ಹೇಳುತ್ತೇನೆ. ಅವರು ಯಾವ ವಿಚಾರಕ್ಕೆ ಬರೆದಿದ್ದಾರೆ, ಎಂಬುದನ್ನು ನಾವು ಓದುವುದಕ್ಕೆ ತಂಯಾರು ಇಲ್ಲ. ಏಕೆಂದರೆ, ಆ ವಿಚಾರವನ್ನು ಚರ್ಚೆಮಾಡುವುದಕ್ಕೆ ನಿಯಮಾವಳಿಗಳಿಗೆ ಬಾಹಿರವಾಗಿರುವಂಥಾದ್ದು. ತಾವು residucal powers ನಲ್ಲಿ ಅವಕಾಶವನ್ನು ಕೊಡಬೇಕೆಂದು ಹೇಳಿದ್ದೀರಿ. ಪತ್ರ ವ್ಯವಹಾರಗಳ ಬಗ್ಗೆ ಚರ್ಚೆಯಾಗಬಾರದೆಂಬ ವಿಚಾರ ಬಂದಾಗ residual powers ಅನ್ನು invoke ಮಾಡುವಂತಹ ಪ್ರಶ್ನೆ ಉದ್ಭವವಾಗುವುದಿಲ್ಲ. ಮತ್ತೆ ಅದಕ್ಕಿಂತ ಹೆಚ್ಚಾಗಿ ಪತ್ರಿಕೆಗಳಲ್ಲಿ ಬಂದಿರುವಂತಹ ವಿಚಾರಗಳನ್ನು ಇಲ್ಲಿ ಚರ್ಚೆ ಮಾಡಬಾರದೆಂದು ಅನೇಕ ಸಂದರ್ಭಗಳಲ್ಲಿ ತಾವು ಇಲ್ಲಿ ನಿಲುಳಿ ಸೂಚನೆಯ ರೂಪದಲ್ಲಿ ಕೊಟ್ಟಿದ್ದೀರಿ. ಈ ಉತ್ತರ ಕರ್ನಾಟಕ ಭಾಗದಲ್ಲಿ ಬರ, ಪ್ರವಾಹ

ಮತ್ತು ಇಲ್ಲಿರುವಂತಹ ಡಾ: ನಂಜುಂಡಪ್ಪ ಆಯೋಗದ ಮೂಲಕ ಉಂಟಾಗಿರುವಂತಹ ಪ್ರಾದೇಶಿಕ ಅಸಮಾನತೆ ಇವುಗಳ ಬಗ್ಗೆ ಹೆಚ್ಚು ಒತ್ತನ್ನು ಕೊಡಬೇಕೆಂದು ನಮ್ಮ ಕಾರ್ಯ ಕಲಾಪಗಳ ಸಭೆಯಲ್ಲಿ ಮಾತನಾಡಿದ್ದೇವೆ. ಅದರ ಬಗ್ಗೆ ಅಜೆಂಡಾದಲ್ಲಿ ಏನು ಇದೆ. ಇಲ್ಲಿರುವಂತಹ ಎಲ್ಲಾ ಮಹನೀಯರು, ಶಾಸಕರು, ಕೂಡ ಆ ವಿಚಾರವನ್ನು ಚರ್ಚೆಗೆ ತೆಗೆದುಕೊಳ್ಳದೇ, ನಾನು ಇದನ್ನು ಅಮುಖ್ಯವೆಂದು ಹೇಳುವುದಿಲ್ಲ. ಆದರೆ ನಿಯಮಾವಳಿಗಳಿಗೆ ಬಾಹಿರವಾಗಿರುವಂಥ ವಿಷಯಗಳನ್ನು ಎತ್ತಿ, ಕಾರ್ಯಕಲಾಪಗಳನ್ನು ವಿನಾಕಾರಣ ವ್ಯಯ ಮಾಡುವಂಥಾದ್ದು, ಮೂಲಭೂತವಾದ ಸಮಸ್ಯೆಗಳು ಏನೆಂಬ ಬಗ್ಗೆ ನಾವು ಎಲ್ಲಾ ಶಾಸಕರುಗಳ ಅಭಿಪ್ರಾಯವನ್ನು ಕೇಳಿದ್ದೇವೆ. ಅದಕ್ಕೆ ಸರ್ಕಾರ ಕೂಡ ಸ್ಪಂದಿಸಬೇಕೆಂಬ ವಿಚಾರವನ್ನು ಅವರು ಪ್ರಸ್ತಾಪ ಮಾಡಿರುವಂಥಾದ್ದು ಇದೆ. ಆದ ಕಾರಣ ದಯವಿಟ್ಟು ಇದನ್ನು ಮೇಲ್ನೋಟಕ್ಕೆ ಇದನ್ನು ತಿರಸ್ಕರಿಸಿ ಬರ, ಪ್ರವಾಹ ಮತ್ತು ಪ್ರಾದೇಶಿಕ ಅಸಮಾನತೆ ಈ ವಿಚಾರವನ್ನು ಚರ್ಚೆ ಮಾಡುವುದಕ್ಕೆ ಅವಕಾಶ ಕೊಡಬೇಕೆಂದು ಹೇಳುತ್ತೇನೆ.

ಶ್ರೀ. ಪ್ರಕಾಶ್ ಖಂಡ್ರೆ : ಮಾನ್ಯ ಅಧ್ಯಕ್ಷರೆ, ಈ ಉತ್ತರ ಕರ್ನಾಟಕದ ವಿಶೇಷ ಅಧಿವೇಶನದಲ್ಲಿ, ನಾವೆಲ್ಲರೂ ಗಡಿ ಭಾಗದಲ್ಲಿ ಇರುವವರು, ನಮ್ಮಲ್ಲಿ ಗಡಿ ಪ್ರದೇಶದಲ್ಲಿ ಬಹಳಷ್ಟು ಸಮಸ್ಯೆಗಳು ಇವೆ. ಇಲ್ಲಿ ಉತ್ತರ ಕರ್ನಾಟಕದ ಬಗ್ಗೆ ಚರ್ಚೆಯಾಗಬೇಕು. ಇಲ್ಲಿ ಉತ್ತರ ಕರ್ನಾಟಕದ ಬಗ್ಗೆ ಬಿಟ್ಟು ಬೇರೆ ವಿಷಯಗಳು ಚರ್ಚೆಯಾಗಬಾರದು. ಇದು ಕೊನೆಯ ಅಧಿವೇಶನವಲ್ಲ, ಇನ್ನು ಬಹಳಷ್ಟು ಅಧಿವೇಶನಗಳು ಇವೆ, ಬೆಂಗಳೂರಿನಲ್ಲೂ ಅಧಿವೇಶನ ನಡೆಯುತ್ತವೆ. ನಾವು ಏನು ಸಮಸ್ಯೆಯನ್ನು ಎದುರಿಸುತ್ತೇವೆಂಬ ಬಗ್ಗೆ ಈ ಸದನದಲ್ಲಿ ಗೊತ್ತಾಗಬೇಕು. ಅದು ಮಹಾರಾಷ್ಟ್ರದ ಗಡಿ ಬಗ್ಗೆ, ರಸ್ತೆ ಬಗ್ಗೆ, ಮತ್ತೆ ಕಬ್ಬಿಗೆ ಸರಿಯಾದ ಬೆಲೆ ಸಿಗುತ್ತಾ ಇಲ್ಲ. ಇಲ್ಲಿ ಬಹಳಷ್ಟು ಸಮಸ್ಯೆಗಳು ಇವೆ. ಇವುಗಳ ಬಗ್ಗೆ ಇಲ್ಲಿ ಚರ್ಚೆ ಮಾಡಿ, ಬರಗಾಲದ ಬಗ್ಗೆ ಚರ್ಚೆ ಮಾಡಿ, ಇಲ್ಲವೆಂದರೆ ನಾವು ಒಪ್ಪುವುದಿಲ್ಲ. ಇಲ್ಲಿ ನಾವು ಉತ್ತರ ಕರ್ನಾಟಕ ಭಾಗದ ಶಾಸಕರು ಯಾರು ಇದ್ದೇವೆ, ಈ ಉತ್ತರ ಕರ್ನಾಟಕದ ಬಗ್ಗೆ ಚರ್ಚೆಯಾಗಬೇಕು, ಅಂತ ಆಸೆ ಇಟ್ಟುಕೊಂಡಿದ್ದೇವೆ. ಜನರೂ ಆ ಆಶಯವನ್ನು ಇಟ್ಟುಕೊಂಡಿದ್ದಾರೆ. ಇಲ್ಲಿ ಇವತ್ತು developmentಗೆ ಏನಾದರೂ ಕೊಡಬಹುದೆಂದು ಇದ್ದಾರೆ. ಸರ್ಕಾರದವರು ಬಹಳಷ್ಟು development ಯೋಜನೆಗಳನ್ನು ಇಟ್ಟುಕೊಂಡಿದ್ದಾರೆ. ಆದುದರಿಂದ ದಯಮಾಡಿ ಉತ್ತರ ಕರ್ನಾಟಕದ ಬಗ್ಗೆ ವಿಶೇಷವಾಗಿ ಚರ್ಚೆ ಮಾಡಿ. ಬೇರೆ ವಿಷಯಗಳನ್ನು ಮುಂದಿನ ಅಧಿವೇಶನದಲ್ಲಿ ತೆಗೆದುಕೊಳ್ಳಬೇಕೆಂದು ನಾನು ವಿರೋಧ ಪಕ್ಷದವರಲ್ಲಿ ವಿನಂತಿ ಮಾಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೆ, ತಾವು ನಮಗೆ ಇಂದಿನ ಕಾರ್ಯಕಲಾಪಗಳ ಪಟ್ಟಿಯನ್ನು ಕಳುಹಿಸಿದ್ದೀರಿ. ಇಲ್ಲಿ ದೊಡ್ಡ ಅಪರಾಧವಾಗಿದೆ.

ಮೊದಲನೆಯದಾಗಿ ಸಂತಾಪ ಸೂಚನೆ ಇದೆ. ಮೊದಲು ಸಭೆಯಲ್ಲಿ ಸಂತಾಪ ಸೂಚನೆಯನ್ನು ತೆಗೆದುಕೊಳ್ಳಬೇಕು. ಅದು ಬಿಟ್ಟು ಬೇರೆ ವಿಚಾರಗಳನ್ನು ತೆಗೆದುಕೊಳ್ಳಬಾರದು. ಇದು ತಮ್ಮ ಗಮನಕ್ಕೆ ಬರಲಿಲ್ಲವೇ?

ಅಧ್ಯಕ್ಷರು : ನನ್ನ ಗಮನಕ್ಕೆ ಬಂದಿದೆ, ಸಂತಾಪ ಸೂಚನೆ ಎಂಬುದು ಗೊತ್ತು, ಆದರೆ ಮೊದಲು ನೀವೇ ಎದ್ದು ನಿಂತಿದ್ದು, ಏನು ಮಾಡುವುದು?

ಶ್ರೀ ವಾಟಾಳ್ ನಾಗರಾಜ್ : ತಾವು ಹೇಳಿದ ಮೇಲೆ ಕುಳಿತುಕೊಂಡೆ, ಮೊದಲು ಸಂತಾಪ ಸೂಚನೆಯನ್ನು ಮಾಡಿ.

ಅಧ್ಯಕ್ಷರು : ಮಾನ್ಯ ವಾಟಾಳ್ ನಾಗರಾಜ್‌ರವರೆ ಆಯಿತು, ಈಗ ಸಂತಾಪ ಸೂಚನೆಯನ್ನುತೆಗೆದುಕೊಳ್ಳೋಣ.

ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯ

ವಿಷಯ : ಬೆಳಗಾವಿ ಮಹಾನಗರ ಪಾಲಿಕೆ ಕಟ್ಟಡದ ಮೇಲಿನ ಎಂಇಎಸ್ ಧ್ವಜವನ್ನು ತೆಗೆಸುವ ಬಗ್ಗೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೆ, ಅದನ್ನು ಸಂಜೆಗೆ ಇಟ್ಟುಕೊಳ್ಳೋಣ. ನಾನು ತಮ್ಮ ಕೊಠಡಿಯಲ್ಲಿ ಕುಳಿತು ಮಾತನಾಡುವಾಗ ಗಡಿಭಾಗದ ಬಗ್ಗೆ ಸಮಗ್ರವಾಗಿ ಚರ್ಚೆಯಾಗಬೇಕೆಂಬ ಬಗ್ಗೆ ತಮಗೆ ಹೇಳಿದೆ. ಅದನ್ನು ತಾವು ಅರ್ಥಮಾಡಿಕೊಂಡಿದ್ದೀರಿ. ಬೆಳಗಾವಿಯಲ್ಲಿ ಸಭೆ ನಡೆಯುತ್ತಿರುವಂಥಾದ್ದು, ಬೆಳಗಾವಿಗೆ ಸಂಬಂಧಿಸಿದ ವಿಚಾರದ ಬಗ್ಗೆ ಸಮಸ್ಯೆಗಳು ಇವೆಯೆಂಬುದನ್ನು ಮನವರಿಕೆ ಮಾಡಿಕೊಟ್ಟಿದ್ದೆ. ತಾವೂ ಸಹ ಅದನ್ನು ಒಪ್ಪಿಕೊಂಡಿದ್ದೀರಿ. ಬೆಳಗಾವಿಯಲ್ಲಿ ಕನ್ನಡಿಗರಿಗೆ ಆಗುತ್ತಿರುವಂತ ಅನ್ಯಾಯದ ಬಗ್ಗೆ ಗಮನಹರಿಸಬೇಕು. ಹಿಂದಿನ ಸರ್ಕಾರದಲ್ಲಿ ಮಾನ್ಯ ಧರ್ಮಸಿಂಗ್‌ರವರು ಮುಖ್ಯಮಂತ್ರಿಗಳಾಗಿದ್ದಾಗ ವಿಧಾನಸಭೆಯಲ್ಲಿ ಮಹಾರಾಷ್ಟ್ರ ಗಡಿಯ ಬಗ್ಗೆ ನಿರ್ಣಯ ಮಾಡುವ ಬಗ್ಗೆ ಹೇಳಿದ್ದೆ. ಕಳೆದ ಸಭೆಯಲ್ಲಿ ಇಲ್ಲಿ ನಗರಪಾಲಿಕೆಯ ಮೇಲೆ ರಾಷ್ಟ್ರಧ್ವಜ ಇರಬೇಕೆ MES ಧ್ವಜ ಇರಬೇಕೆ ಎಂಬ ಬಗ್ಗೆ ಇನ್ನೂ ತೀರ್ಮಾನ ಆಗಿಲ್ಲ. ನಾನು ಈ ಬಗ್ಗೆ ಅನೇಕ ಬಾರಿ ಹೇಳಿದ್ದೇನೆ. ಮಾನ್ಯ ಗೃಹ ಮಂತ್ರಿಗಳು ತಕ್ಷಣ ತೆಗೆದುಹಾಕುತ್ತೇವೆಂದು ಹೇಳಿದ್ದರು. ಇದು ಸರ್ಕಾರಿ ಕಟ್ಟಡವೇ, ಖಾಸಗಿ ಕಟ್ಟಡವೇ, ಸ್ವಂತ ಕಟ್ಟಡವೇ? ಸರ್ಕಾರೀ ಕಟ್ಟಡದ ಮೇಲೆ ರಾಷ್ಟ್ರಧ್ವಜ ಇರಬೇಕು ಅಥವಾ ಕರ್ನಾಟಕದ ಧ್ವಜ ಇರಬೇಕು. ಇವುಗಳ್ಯಾವುದೂ ಅಲ್ಲದೇ ಬೇರೆ ಯಾವುದೋ ಧ್ವಜವನ್ನು ಹಾರಿಸಲು ನೀವು ಅವಕಾಶ ಮಾಡಿಕೊಟ್ಟಿದ್ದೀರಿ. ಆ ಧ್ವಜವನ್ನು ತೆಗೆಸುವುದನ್ನು ಬಿಟ್ಟು ಸುಮ್ಮನೆ ಇಲ್ಲಿ ಬಂದು ಅಧಿವೇಶನ ಮಾಡಿದರೆ ಏನೂ ಪ್ರಯೋಜನವಾಗುವುದಿಲ್ಲ. ಮಹಾಜನ್ ವರದಿ ಕಾರ್ಯಗತವಾಗಿಲ್ಲ. ಮಹಾರಾಷ್ಟ್ರದ ಉಪಮುಖ್ಯಮಂತ್ರಿಗಳು ಇಲ್ಲಿಗೆ ಬಂದು ಮಹಾಜನ್ ವರದಿಯ ವಿರುದ್ಧವಾಗಿ, ಈ ರಾಜ್ಯದ ವಿರುದ್ಧವಾಗಿ, ಬೆಳಗಾವಿಯ ವಿರುದ್ಧವಾಗಿ ಉದ್ಧಟತನದ ಮಾತನ್ನಾಡಿದ್ದಾರೆ. ಇದುವರೆಗೂ